ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 28 ಜುಲೈ 13, 1986 ಬೆಲೆ 80 ಪೈಸೆ.

ಲೇ ಜ್ವಾನ್ ನಿಧನ

ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಸಂತಾಪ

ವಿಯತ್ ನಾಮ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಬಹು ದೀರ್ಘಕಾಲದಿಂದಲೂ ಕೆಲಸ ಮಾಡುತ್ತ ಬಂದಿದ್ದ ಕಾಮ್ರೇಡ್ ಲೇಜ್ವಾನ್ ಅವರು ಅನಾರೋಗ್ಯದಿಂದಾಗಿ ಜುಲೈ 10 ರಂದು ಮರಣವನ್ನಪ್ಪಿದ್ದಾರೆ. ಆಗ ಅವರಿಗೆ 78 ವರ್ಷ ವಯಸ್ಸು. ವಿಯಟ್‌ನಾಮಿನ ವಿಮೋಚನೆಗಾಗಿ ಅವರು ಸಶಸ್ತ್ರ ಕ್ರಾಂತಿಯ ನಿಲುವು ತಾಳಿದ್ದರು. ಇಡೀ ವಿಯತ್‌ನಾಮನ್ನು ವಿಮೋಚನೆಗೊಳಿಸುವ ಮಹಾಕ್ರಾಂತಿಯಲ್ಲಿ ಹೋಚಿಮಿನ್ ಅವರ ಬೆನ್ನೆಲುಬಾಗಿ ನಿಂತವರು ಲೇ ಜ್ವಾನ್.

ಲೇ ಜ್ವಾನ್ ಅವರ ಅಕಾಲಿಕ ನಿಧನಕ್ಕೆ ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಅಪಾರ ಸಂತಾಪವನ್ನು ವ್ಯಕ್ತಪಡಿಸಿ ಪಕ್ಷದ ಸದಸ್ಯರ ಪರವಾಗಿ ಕೆಂಪು ವಂದನೆ ಸಲ್ಲಿಸುತ್ತದೆ.

ನಿರುಪಯೋಗ ಗಡಿ ಚಳುವಳಿ ಸ್ಥಗಿತ

ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿಯವರು ಒಂದು ತಿಂಗಳಿಂದ ನಡೆಸುತ್ತಿದ್ದ ಚಳುವಳಿಯನ್ನು ನಿಲ್ಲಿಸಿದ್ದಾರೆ. ಕರ್ನಾಟಕದ ಗಡಿ ಪ್ರದೇಶಗಳಲ್ಲಿಯ ಶಾಲೆಗಳಲ್ಲಿ ಮಕ್ಕಳಿಗೆ ಕಡ್ಡಾಯವಾಗಿ ಕನ್ನಡ ಕಲಿಸುವುದನ್ನು ಪ್ರತಿಭಟಿಸಿ ಚಳುವಳಿ ಪ್ರಾರಂಭಿಸಲಾಗಿತ್ತು. ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿ ಸೀಮಾ ಸಮಿತಿಯ ಮುಖಂಡರು ನಡೆಸಿದ ಚರ್ಚೆಯ ಫಲವಾಗಿ ಈ ನಿರ್ಣಯ ಹೊರಬಿದ್ದಿದೆ. ಮಹಾರಾಷ್ಟ್ರ-ಕರ್ನಾಟಕ ಗಡಿಯಲ್ಲಿರುವ ಅಲ್ಪಭಾಷಿಕರ ಸಮಸ್ಯೆಗಳಿಗೆ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೆಡೆ ಸೇರಿ ಚರ್ಚಿಸಿ, 1986ರೊಳಗಾಗಿ ಸೌಹಾರ್ದಯುತವಾಗಿ "ಕೊಟ್ಟು ತೆಗೆದು ಕೊಳ್ಳುವ" ನೀತಿಗನುಸರಿಸಿ ಪರಿಹಾರ ಕಂಡುಹಿಡಿಯಬೇಕೆಂಬ ಒಮ್ಮತದ ನಿರ್ಣಯಕ್ಕೆ ಬರಲಾಯಿತು. ಕರ್ನಾಟಕ ರಾಜ್ಯದಲ್ಲಿ ಮೂರನೇ ತರಗತಿಯವರೆಗೆ ಕನ್ನಡ ಕಲಿಸುತ್ತಿದ್ದರೂ ನಾಲ್ಕನೇ ತರಗತಿಯಿಂದ ಮಾತ್ರ ಅದು ಕಡ್ಡಾಯವಾಗಿದೆ. ಮಹಾರಾಷ್ಟ್ರದಲ್ಲಿ ಐದನೆಯ ತರಗತಿಯಿಂದ ಮರಾಠಿ ಕಡ್ಡಾಯವಾಗಿದೆ. ಸಮಿತಿ ಮುಖಂಡರ ಮತ್ತು ಕರ್ನಾಟಕದ ಮುಖ್ಯಮಂತ್ರಿಯೊಡನಾದ ಒಪ್ಪಂದದ ನಂತರ ಕರ್ನಾಟಕದೊಂದಿಗಿನ ಗಡಿ ಪ್ರದೇಶಗಳಲ್ಲಿದ್ದ ಎಂಟನೆಯ ತರಗತಿವರೆಗಿನ ಮರಾಠಿ ಭಾಷೆಯ ಕಲಿಕೆಯನ್ನು ಮಹಾರಾಷ್ಟ್ರ ಸರ್ಕಾರ ರದ್ದುಪಡಿಸಿದ ಪ್ರಕಟಣೆ ಹೊರಡಿಸಿದೆ. ಗಡಿ ಪ್ರದೇಶಗಳಲ್ಲಿ ಸೌಹಾರ್ದಯುತವಾತಾವರಣ ಉಂಟು ಮಾಡುವ ದೃಷ್ಟಿಯಿಂದ ಈ ನಿರ್ಣಯ ಕೈಗೊಳ್ಳಲಾಗಿದೆಂದು ಹೇಳಲಾಗಿದೆ.

ಪಂಜಾಬ್, ಗುಜರಾತ್, ಅಸ್ಸಾಂ ಹಾಗೆಯೇ ದೇಶದ ಹಲವಾರು ಕಡೆಗಳಲ್ಲಿ ಭಯೋತ್ಪಾದಕರೂ, ಛಿದ್ರಕಾರಿ ಶಕ್ತಿಗಳು, ಹಿಂದೂ-ಮುಸ್ಲಿಂ ಮೂಲಭೂತವಾದಿಗಳು, ಗಲಭೆಗಳನ್ನೆಬ್ಬಿಸಿ, ದೇಶದ ಐಕ್ಯತೆಗೆ, ಕಾನೂನು ಸುವ್ಯವಸ್ಥೆಗೆ, ಜನರೊಳಗಿನ ಸೌಹಾರ್ದತೆಗೆ ಅಪಾಯವನ್ನುಂಟುಮಾಡುತ್ತಿರುವ ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಭಾಷೆ–ಗಡಿಗಳ ನೆವ ಮುಂದೆ ಮಾಡಿ ಹಿಂಸಾತ್ಮಕ ಚಳುವಳಿ ಹೂಡಿರುವುದು ಅಕ್ಷಮ್ಯ. ಶಿವಸೇನೆಯಂತ ಜಾತೀಯ ಪಕ್ಷದೊಡನೆ ಸೇರಿಕೊಂಡು ಗಡಿ ಚಳುವಳಿ ನಡೆಸಿದಪವಾರ್–ಜೋಶಿ ಕಂಪೆನಿ ಏಳು ಜೀವ ಬಲಿತೆಗೆದುಕೊಂಡು,ಲಕ್ಷಾವಧಿ ರೂ. ಬೆಲೆಯ ಸಾರ್ವಜನಿಕ ಆಸ್ತಿಗೆ ಹಾನಿ ಉಂಟು ಮಾಡಿ, ಕುಡಿಯುವ ನೀರು ಸಿಗದಂತೆ ಮಾಡಿ ಕನ್ನಡ ಮರಾಠಿ, ಜನರೊಳಗೆ ವಿನಾಕಾರಣ ವೈಮನಸ್ಸನ್ನುಸೃಷ್ಟಿ ಮಾಡಿತಾವುಗೆದ್ದುಕೊಂಡಿರುವುದು ಏನೂ ಇಲ್ಲ. ಶಿವಸೇನೆಯಂತ ಜಾತಿವಾದಿಗಳಿಗಷ್ಟೇ ಲಾಭ ಮಾಡಿಕೊಟ್ಟಿದೆ.

"ಇಂಡಿಯನ್ ಎಕ್ಸ್‌ಪ್ರೆಸ್" ತನ್ನ ಸಂಪಾದಕೀಯದಲ್ಲಿ ಹೀಗೆ ಹೇಳಿದೆ. "ಅಲ್ಪಮತಸ್ತರ ಹಕ್ಕುಗಳ ಕುರಿತು ಈ ಒಪ್ಪಂದ ಏನೂ ಹೇಳುತ್ತಿಲ್ಲ. ಈ ಮುಂಚೆಯೆ ಪ್ರಕಟಿಸಿರುವುದನ್ನು ಬಿಟ್ಟು ಹೊಸ ಪರಿಹಾರವನ್ನೇನೂ ಅದು ಸೂಚಿಸುತ್ತಿಲ್ಲ. ಒಂಭತ್ತು ಜೀವಗಳನ್ನು ಬಲಿತೆಗೆದುಕೊಂಡು, ಕೋಟ್ಯಾವಧಿ ಬೆಲೆ ಆಸ್ತಿಗೆ ಹಾನಿ ಉಂಟುಮಾಡಿದ್ದಲ್ಲದೆ ಚಳುವಳಿ ಏನೂ ಪ್ರತಿಫಲ ನೀಡಿಲ್ಲ ಬದಲಾಗಿಕಾಸರಗೋಡಿನಲ್ಲಿಕನ್ನಡಿಗರು

(8ನೇ ಪುಟ ನೋಡಿ.)

ಲಾಲ್ ಡೆಂಗಾನೊಂದಿಗೆ ಒಪ್ಪಂದ –

ದಂಗೆಕೋರತನಕ್ಕೆ ಶರಣಾಗತಿ

ಒಂದೆಡೆ ಖಾಲಿಸ್ತಾನೀ ಭಯೋತ್ಪಾದಕರ ವಿರುದ್ಧ ಕೇಂದ್ರ ಸರಕಾರ "ಗುಡುಗಿದ" ದಿನವೇ ಇನ್ನೊಂದೆಡೆ ಅದೇ ಕೇಂದ್ರ ಸರಕಾರ ಅಮೇರಿಕನ್ ಸಾಮ್ರಾಜ್ಯಶಾಹಿಯ ಕುಯುಕ್ತಿ ಹಾಗೂ ಬೆಂಬಲದಿಂದ ಕಳೆದ ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ಮಿಜೋ ಭಯೋತ್ಪಾದಕತೆಯ ಮುಖಂಡತ್ವ ವಹಿಸಿದ್ದ ಲಾಲ್‌ಡೆಂಗಾನೊಂದಿಗೆ ಕೈಕುಲುಕಲು ಮುನ್ನುಗ್ಗುವ ಸುದ್ದಿ ಬಂದಿದೆ. ಇಷ್ಟೇ ಅಲ್ಲ, ಕ್ರಮಬದ್ಧವಾಗಿ ಚುನಾಯಿತರಾದ ಕಾಂಗ್ರೆಸ್ ಮುಖ್ಯ ಮಂತ್ರಿ ಲಾಲ್ಥನ್ ಹಾವ್ಲಾರನ್ನು ಇಷ್ಟಬಂದಂತೆ ಬದಲಿಸಿ ಆಸ್ಥಾನದಲ್ಲಿ ಈ ನೆಚ್ಚಲಾಗದ ಮನುಷ್ಯ ಲಾಲ್‌ಡೆಂಗಾರನ್ನು ಮಿಜೋರಾಂನ ಮುಖ್ಯಮಂತ್ರಿಯನ್ನಾಗಿ ಮಾಡಲು ಕೂಡ ಒಪ್ಪಲಾಗಿದೆಯಂತೆ. ಈಗ ಸರಕಾರಿ ಮಟ್ಟದಲ್ಲಿಯೂ ಸಹಿ ಮಾಡಿ ಅಧಿಕೃತ ಮುದ್ರೆಯನ್ನೂ ಪಡೆದ ಈ ರೀತಿಯ "ಒಪ್ಪಂದ" ನಡೆದಿರುವುದು ಸ್ವತಂತ್ರ ಭಾರತದ ನಾಲ್ಕು ದಶಕಗಳಲ್ಲಿ ಇದೇ ಮೊತ್ತಮೊದಲು. ಬಟ್ಟೆಯನ್ನು ತೆಗೆದೊಗೆವಂತೆ ಸುಲಭವಾಗಿ ಬದಲಿಸಿ 800ರಿಂದ 1000 ದಷ್ಟು ಸಶಸ್ತ್ರ ಸ್ವಯಂ ಸೇವಕರಿಂದ ಸಜ್ಜಿತನಾದ ಎಂ. ಎನ್. ಎಫ್. ಮುಖಂಡ ಮುಂದೆ ಅಸ್ತಿತ್ವಕ್ಕೆ ಬರಲಿರುವ ಮಿಜೋರಾಂ ರಾಜ್ಯದ ಮುಖ್ಯಮಂತ್ರಿಯಾಗುತ್ತಾನೆ! ಆತನ ಆಶ್ರಯದಲ್ಲಿ ಚುನಾವಣೆ ನಡೆಯುತ್ತದೆ, ಆಗ ಸದ್ಯದ ಮುಖ್ಯಮಂತ್ರಿಗೆ ಕೇವಲ ತಂತಿ ಬಾರಿಸುವ ಕೆಲಸ! ಇಂತಹ ಮಿಜೋರಾಂ ಒಪ್ಪಂದ ಎಂ. ಎನ್. ಎಫ್. ಹಾಗೂ ದಶಕಗಳ ಕಾಲದ ಭಯೋತ್ಪಾದಕತೆಯೆದುರು ನಾಚಿಕೆಗೇಡಿನ ಪೂರ್ಣ ಶರಣಾಗತಿಯಲ್ಲದೆ ಬೇರೇನು?

ಇದರಿಂದಾಗಿಯೇ ಈ ಒಪ್ಪಂದದ ವಿರುದ್ಧ ಬಂಡವಾಳಶಾಹಿ ಪತ್ರಿಕೆಗಳಲ್ಲೂ ಬಹಳಷ್ಟು ಟೀಕೆಗಳು ಬಂದಿವೆ. ಹಿಂದೂಸ್ಥಾನ್‌ಟೈಮ್ಸ್ ಪತ್ರಿಕೆ ಈ ಬಗ್ಗೆ ಬರೆದ ಸಂಪಾದಕೀಯದಲ್ಲಿ ಎರಡು ಅಂಶಗಳನ್ನು ಗಮನಿಸಿದೆ. ಮೊದಲನೆಯದಾಗಿ, ಒಂದು ಚುನಾಯಿತ ಸರಕಾರವನ್ನು ತೆಗೆದುಹಾಕಿ ಆಳುವ ಬಹುಮತದ ಪಕ್ಷವನ್ನು ಒಬ್ಬ ವ್ಯಕ್ತಿಯ ಹಾಡಿಗೆ ಶ್ರುತಿ ನೀಡುವ ಮಟ್ಟಕ್ಕಿಳಿಸಿದ್ದು ಹಾಗೂ ಎರಡನೆಯದು, ಲಾಲ್‌ಡೆಂಗಾಗೆ 600 ಅಥವಾ ಅದಕ್ಕೂ ಹೆಚ್ಚು ದಂಗೆಕೋರರು ಶಸ್ತ್ರತ್ಯಾಗಮಾಡಿ ಶರಣಾಗತರಾಗುವಂತೆ ಮಾಡುವ ಸಾಮರ್ಥ್ಯ ಇದೆಯೇ? ಎಂಬ ಅನುಮಾನ. ಅಲ್ಲದೆ ಈ ವ್ಯಕ್ತಿಯ ಸುತ್ತ

(ಎಂಟನೆಯ ಪುಟ ನೋಡಿ)

ಪವರ್‌ಲೂಂ ಕಾರ್ಮಿಕರಿಗೆ ಮಾರಕವಾದ

ಹೊಸ ಜವಳಿ ನೀತಿ–ಖಂಡನೆ

ಕೇಂದ್ರ ಸರಕಾರದ ಹೊಸ ಜವಳಿ ನೀತಿ ದೇಶದಲ್ಲಿರುವ ಬಟ್ಟೆ ಗಿರಣಿ, ವಿದ್ಯುತ್ ಚಾಲಿತ ಮಗ್ಗಗಳು ಹಾಗೆಯೇ ಕೈಮಗ್ಗಗಳು ಭೀಕರ ಬಿಕ್ಕಟ್ಟನ್ನೆದುರಿಸುವಂತೆ ಮಾಡಿದೆ. ದೇಶದಲ್ಲಿ ನೂರಾರು ಬಟ್ಟೆ ಗಿರಣಿಗಳು ಈಗಾಗಲೇ ಮುಚ್ಚಲ್ಪಟ್ಟು ಲಕ್ಷಾವಧಿ ಜನ ಬೀದಿ ಪಾಲಾಗಿ ಉಪವಾಸ ಬೀಳುವಂತಾಗಿವೆ. ಮುಚ್ಚಲ್ಪಟ್ಟ ಗಿರಣಿಗಳನ್ನು ಸರಕಾರ ವಹಿಸಿಕೊಂಡು ನಡೆಸುತ್ತಿಲ್ಲ. ಗಿರಣಿಗಳ ಆಧುನೀಕರಣದ ಹೆಸರಿನಲ್ಲಿಯೂ ಕೆಲಸಗಾರರು ಕೆಲಸ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಲಕ್ಷಾವಧಿ ನಿರುದ್ಯೋಗಿ ಬಟ್ಟೆ ಗಿರಣಿ ಕಾರ್ಮಿಕರ ಸಂಕಷ್ಟವನ್ನು ಕಂಡೂ ಸಮಾಧಾನ ಪಡೆಯದ ರಾಜೀವಗಾಂಧಿ ಸರಕಾರ ಪವರ್‌ಲೂಮ್ ಮತ್ತು ಅದರಲ್ಲಿ ದುಡಿಯುತ್ತಿರುವ ಕಾರ್ಮಿಕರ ಮೇಲೆ ಗಧಾ ಪ್ರಹಾರ ಮಾಡಿದೆ. ಸಾವಿರಾರು ಪವರ್ ಲೂಮುಗಳು ಮುಚ್ಚಲ್ಪಡುವಂತೆ ಮಾಡಿ ಅವುಗಳಲ್ಲಿ ದುಡಿಯುತ್ತಿರುವ ಕಾರ್ಮಿಕರೆಲ್ಲ ಉಪವಾಸ ಬೀಳುವಂತೆ ಮಾಡಿದೆ.

ಪವರ್ ಲೂಮ್‌ಗಳಲ್ಲಿ ರೇಶ್ಮೆಯ ಬಣ್ಣದ ಹಾಗೂ ಇತರ ಸೀರೆಗಳನ್ನು ನೇಯಬಾರದೆಂದು ಕೇಂದ್ರ ಸರಕಾರ ಆದೇಶ ಹೊರಡಿಸಿದೆ. ಸೀರೆಗಳು ಕೈಮಗ್ಗಗಳಲ್ಲೇ ತಯಾರಾಗಬೇಕೆಂಬ ಆಜ್ಞೆಯಿಂದಾಗಿ ನಮ್ಮ ರಾಜ್ಯದಲ್ಲಿ 75,000ಕ್ಕೂ ಮೇಲ್ಪಟ್ಟು ವಿದ್ಯುತ್ ಚಾಲಿತ ಮಗ್ಗಗಳು ಕೆಲಸ ಮಾಡದೆ ಸ್ಥಗಿತಗೊಂಡಿವೆ. 20 ಲಕ್ಷಕ್ಕೂ ಮೇಲ್ಪಟ್ಟು ಕೆಲಸಗಾರರ ಉದ್ಯೋಗಕ್ಕೆ ಸಂಚಕಾರವೆಸಗಿದಂತಾಗಿದೆ.

ಕಳೆದ ಹಲವಾರು ವರ್ಷಗಳಿಂದಲೂ ಕೇಂದ್ರ ಸರಕಾರ ಪವರ್‌ಲೂಮ್‌ಗಳಲ್ಲಿ ಸೀರೆ ನೇಯಬಾರದೆಂಬ ಆಜ್ಞೆಗಳನ್ನು ಹೊರಡಿಸುತ್ತಲೇ ಬಂದಿತ್ತು. ಮಾಲೀಕರ ಮತ್ತು ಕಾರ್ಮಿಕರ ಪ್ರತಿಭಟನೆ ಬಲಿಷ್ಟವಾದಾಗ ತನ್ನ ಆಜ್ಞೆಗಳನ್ನು ವಾಪಸು ಪಡೆಯುತ್ತಿತ್ತು. ಕೈಮಗ್ಗದವರ ಒತ್ತಡ ಹೆಚ್ಚಾದಾಗ ಮತ್ತೆ ಪ್ರತಿಬಂಧಕಾಜ್ಞೆ ಹೊರಡಿಸುತ್ತಿತ್ತು. ಹೀಗೆ ಒಂದು ಸಮಗ್ರ ಆರ್ಥಿಕ

(8ನೇ ಪುಟ ನೋಡಿ.)

ಸಮಾಚಾರ

ವಿವಿಧ ರಾಜ್ಯಗಳಲ್ಲಿ

ಪಂಜಾಬ್

ಅಮೃತಸರದಲ್ಲಿ ಶಾಂತಿಯಾತ್ರೆ

ಕೇಂದ್ರೀಯ ಟ್ರೇಡ್ ಯೂನಿಯನ್‌ಗಳ ಜಂಟಿ ಸಮಿತಿಯೊಂದು ಜೂನ್ 11, 12, 13 ರಂದು ಪಂಜಾಬಿನ ಹಲವು ಪ್ರದೇಶಗಳಲ್ಲಿ ಪ್ರವಾಸ ಮಾಡಿತು. ಇದು ಮೇ 11 ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಐಕ್ಯತೆಗಾಗಿ ಮತ್ತು ಕೋಮುವಾದ, ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಸೇರಿದ್ದ ಎಲ್ಲಾ ಟ್ರೇಡ್‌ಯೂನಿಯನ್‌ಗಳ ಸಮಾವೇಶದ ನಿರ್ಣಯಗಳಲ್ಲಿ ಒಂದಾಗಿತ್ತು. ಜಂಟಿ ಸಮಿತಿ ಜೂನ್ 11 ರಂದು ಅಮೃತಸರ ಜಿಲ್ಲೆಯ ಹಲವು ಪ್ರದೇಶಗಳಿಗೆ ಭೇಟಿ ನೀಡಿ ಜನಸಾಮಾನ್ಯರನ್ನು ಅದರಲ್ಲೂ ಭಯೋತ್ಪಾದಕರ ಗುರಿಗೀಡಾದ ಸಂಸಾರಗಳನ್ನು ಭೇಟಿ ಮಾಡಿತು. ಜೂನ್ 12 ರಂದು ಅಮೃತಸರದಲ್ಲಿ ಭಾರಿ ಶಾಂತಿ ರ್‍ಯಾಲಿಯನ್ನುದ್ದೇಶಿಸಿ ಜಂಟಿ ಸಮಿತಿಯ ಸದಸ್ಯರು ಭಾಷಣ ಮಾಡಿದರು. ಇದರ ನಂತರ ಏರ್ಪಡಿಸಿದ್ದ ಭಾರಿ ಶಾಂತಿ ಯಾತ್ರೆಯಲ್ಲಿ ಸುಮಾರು 10,000 ಜನ ಸೇರಿದ್ದರು. ಜೂನ್ 13 ರಂದು ಜಲಂಧರ್‌ನಲ್ಲಿ ರ್‍ಯಾಲಿ,ಶಾಂತಿ ಯಾತ್ರೆ ಏರ್ಪಡಿಸಲಾಗಿತ್ತು. ಇದು ರಾಜ್ಯ ಮಟ್ಟದ ರ್‍ಯಾಲಿಯಾಗಿತ್ತು.

ಅಮೃತಸರದಲ್ಲಿ ಹಿಂದಿನ ದಿನವಷ್ಟೆ ಕೋಮುವಾದಿ ಪ್ರಕ್ಷುಬ್ಧ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಜನ ಸಾಮಾನ್ಯರಿಗೆ ಇಂತಹ ಕಾರ್ಮಿಕರ ರ್‍ಯಾಲಿ ನೋಡುವುದೇ ಅಪರೂಪದ ವಿಚಾರವಾಗಿತ್ತು. ರ್‍ಯಾಲಿ ಮತ್ತು ಶಾಂತಿ ಯಾತ್ರೆಯಲ್ಲಿ ಕಾರ್ಮಿಕ ವರ್ಗದ ಎಲ್ಲಾ ವಿಭಾಗಗಳವರು – ಕಾರ್ಪೋರೇಷನ್ ಕಾರ್ಮಿಕರು, ಹಮಾಲಿಗಳು, ವಿದ್ಯುತ್ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಅಧ್ಯಾಪಕರು, ಬ್ಯಾಂಕ್ ಕಾರ್ಮಿಕರು — ಭಾಗವಹಿಸಿದ್ದರು. ಭಾರಿ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದು ಉಲ್ಲೇಖನೀಯವಾಗಿತ್ತು. ಗೋಲೆಬಾಗ್‌ನಲ್ಲಿ ರ್‍ಯಾಲಿ ಸೇರಿದ್ದು, ಮಧ್ಯಾಹ್ನದ ಎರಡು ಗಂಟೆ ಹೊತ್ತಿಗೆ ಶಾಂತಿ ಯಾತ್ರೆ ಅಲ್ಲಿಂದ ಆರಂಭವಾಗಿ ನಗರದ ಮುಖ್ಯ ಕೇಂದ್ರ ಮತ್ತು ಬಜಾರ್‌ಗಳನ್ನು ದಾಟಿ, ಹಾಲ್ ಗೇಟ್‌ನಲ್ಲಿ ಇನ್ನೊಂದು ರ್‍ಯಾಲಿಯೊಂದಿಗೆಮುಕ್ತಾಯವಾಯಿತು. ಸಂ. ಕಿಶೋರಿಲಾಲ್ (CITU), ಸತ್‌ಪಾಲ್ ದಾಂಗ್ (AITUC) ಬಲವಂತರಾಜ್ ಕಪೂರ್ (AITUC) ಆರ್. ಎನ್. ಹವಾ (BMS), ಪ್ರೊ|| ಖುಶ್‌ಹಾಲ್ ಸಿಂಗ್ (HMS) ಇರುಗಳು ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಜಲಂಧರ್‌ನ ಕಂಪನಿ ಬಾಗ್‌ನಲ್ಲಿ ನಡೆದ ರ್‍ಯಾಲಿಗೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಜನರು ಬಂದಿದ್ದರು, ಆ ಮೇಲೆ ನಡೆದ ಶಾಂತಿ ಯಾತ್ರೆ ಸುಮಾರು 2 ಕಿ.ಮೀ. ಉದ್ದವಾಗಿತ್ತು. ಶಾಂತಿ ಯಾತ್ರೆ ನಗರದ ಕೇಂದ್ರಗಳನ್ನು ದಾಟುತ್ತಿದ್ದಂತೆ, ರಸ್ತೆಯ ಪಕ್ಕದಲ್ಲಿ ನೋಡಲು ಸೇರಿದ್ದ ನಾಗರಿಕರಲ್ಲಿ ಭದ್ರತೆ, ಧೈರ್ಯ ತುಂಬಿದ್ದಲ್ಲದೆ ಸಿಖ್-ಹಿಂದೂ ಐಕ್ಯತೆ ಸಂದೇಶವನ್ನು ಒಯ್ದಿತು,

ಎರಡೂ ರ್‍ಯಾಲಿಗಳಲ್ಲಿ CITU ಪ್ರಧಾನ ಕಾರ್ಯದರ್ಶಿ ಕಾ| ಸಮರ್ ಮುಖರ್ಜಿ ಮಾತನಾಡಿ, ಕಾರ್ಮಿಕ ವರ್ಗ ಭಯೋತ್ಪಾದಕ ತೀವ್ರಗಾಮಿಗಳು ಮತ್ತು ಅವರ ಸಮರ್ಥಕ ಸಾಮ್ರಾಜ್ಯಶಾಹಿಗಳನ್ನು ಬಯಲಿಗೆಳೆದು ಹಿಮ್ಮೆಟ್ಟಿಸುವುದರಲ್ಲಿ, ಪ್ರಜಾಸತ್ತಾತ್ಮಕ ಮತ್ತು ದೇಶ ಪ್ರೇಮಿ ಜನರಿಗೆ ನಾಯಕತ್ವ ನೀಡಬೇಕೆಂದು ಕರೆ ನೀಡಿದರು. ಇದಕ್ಕಾಗಿ ಕಾರ್ಮಿಕ ವರ್ಗದ ಐಕ್ಯತೆ ಮತ್ತು ಹೋರಾಟದ ಮಹತ್ವವನ್ನು ಎಲ್ಲಾ ಭಾಷಣಕಾರರೂ ಒತ್ತಿ ಹೇಳಿದರು. ಎರಡು ರ್‍ಯಾಲಿಗಳಲ್ಲಿ ಸೇರಿದ್ದ ಜನರು ಕೋಮು ಸೌಹಾರ್ದತೆ ಕಾಪಾಡುವ, ಅಲ್ಪಸಂಖ್ಯಾತ ಕೋಮಿನ ಜನರನ್ನು ರಕ್ಷಿಸುವ, ಮತ್ತು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಹೋರಾಡುವ ಪ್ರತಿಜ್ಞೆ ಕೈಗೊಂಡರು. ○

ತ್ರಿಪುರ

ಆದಿವಾಸಿ ವಿದ್ಯಾರ್ಥಿಗಳ ಸಮ್ಮೇಳನ

S F I ಸಂಯೋಜಿತವಾಗಿರುವಗೆ Tribal Student Union‌ನ ಮೊದಲನೆಯ ಕೇಂದ್ರೀಯ ಸಮಾವೇಶ ಉದಯಪುರದಲ್ಲಿ ಮೇ 25 ರಿಂದ 27 ರ ವರೆಗೆ ಜರುಗಿತು. ದೇಶದಲ್ಲೇ ಮೊದಲ ಬಾರಿಗೆ ಆದಿವಾಸಿ ವಿದ್ಯಾರ್ಥಿಗಳ ಸಂಘಟನೆಯೊಂದು ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಮತ್ತು ಸಮಾಜವಾದದ ಕರೆ ನೀಡಿತು. ಸಮಾವೇಶ ಸಂಕುಚಿತ ಭಾವನೆ ಮತ್ತು ತೀವ್ರಗಾಮಿ ರಾಷ್ಟ್ರೀಯತೆ ತೊರೆದು ಜಾತಿ, ಜನಾಂಗ,ಧರ್ಮದ ಭೇದವಿಲ್ಲದೆ ಎಲ್ಲಾ ಯುವಕರಿಗೆ ತಮ್ಮ ಜೀವನ ರೂಪಿಸಲು ಮತ್ತು ಭಾಷೆ, ಜನಾಂಗೀಯ ಸ್ವಂತಿಕೆ ಮತ್ತು ಸಂಸ್ಕೃತಿ ಕಾಪಾಡಿಕೊಂಡು ಬರಲು ಸಮಾನ ಅವಕಾಶಕ್ಕೆ ಒತ್ತಾಯ ತಂದಿದೆ.

ಎಂಟು ವರ್ಷದ ಹಿಂದೆ ರಾಜ್ಯ ಮಟ್ಟದ ಅಧಿವೇಶನವೊಂದರಲ್ಲಿ ಸ್ಥಾಪಿತವಾದ TSU ಬೆಳೆದು ಇಂದು ಬಲವಾದ ಪ್ರಜಾಸತ್ತಾತ್ಮಕ ಸಂಘಟನೆಯಾಗಿದೆ. 4000 ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ TSU ಬೇರೆ ಆದಿವಾಸಿ ವಿದ್ಯಾರ್ಥಿ ಸಂಘಟನೆಗಳಿಗಿಂತ ವಿಭಿನ್ನವಾಗಿ ಬೆಳೆದು ಬಂದಿದೆ. ಅಧಿವೇಶನದಲ್ಲಿ 221 ಪ್ರತಿನಿಧಿಗಳು ಭಾಗವಹಿಸಿದ್ದು ಕಾಲು ಭಾಗ ವಿದ್ಯಾರ್ಥಿನಿಯರಿದ್ದುದು ಉಲ್ಲೇಖನೀಯ. ಸಮ್ಮೇಳನ ಸಂಘಟನೆ ಬಲಪಡಿಸಲು 41 ಜನರಿರುವ ಕೇಂದ್ರ ಸಮಿತಿ ಆಯ್ಕೆ ಮಾಡಿದ್ದಲ್ಲದೆ, 23 ಅಂಶಗಳ ಒತ್ತಾಯದ ಘೋಷಣೆ ಅಂಗೀಕರಿಸಿತು.ಸಮಾವೇಶ ಆದಿವಾಸಿ ವಿದ್ಯಾರ್ಥಿಗಳ ಸಮಸ್ಯೆ ಮತ್ತಿತರ ಆದಿವಾಸಿ ಪ್ರಜಾಸತ್ತಾತ್ಮಕ ಬೇಡಿಕೆಗಳ ಮೇಲೆ ನಿರ್ಣಯ ಅಂಗೀಕರಿಸಿದ್ದಲ್ಲದೆ ಎಡರಂಗ ಸರ್ಕಾರದ ವಿರುದ್ಧ ಪಿತೂರಿಯನ್ನು ಎದುರಿಸಲು ನಿರ್ಧರಿಸಿದೆ. ○

ತ್ರಿಪುರಾದ ಛಿದ್ರಕಾರಿಗಳಲ್ಲಿ ನಿರಾಶಾಭಾವನೆ

"ಆದಿವಾಸಿಗಳಿಗೆ ಸ್ವತಂತ್ರ ತ್ರಿಪುರಾ" ಎಂಬಂತಹ ಆಕರ್ಷಕ ಘೋಷಣೆಗಳ ಸಹ Tribal National Volunteers (TNV–ತ್ರಿಪುರಾ ಉಪಜಾತಿ ಯುವಜನ ಸಭಾದ ಭೂಗತ ಮಿಲಿಟರಿ ಭಾಗ)ನ ಕಾರ್ಯಕರ್ತರಲ್ಲಿ ನಿರಾಶೆಯ ಭಾವನೆಗಳು ಮೂಡದಂತೆ ತಡೆಯುವುದರಲ್ಲಿ ಬಹಳ ಕಾಲ ಯಶಸ್ವಿಯಾಗಲಾರವು ಎಂಬುದು–ಅಗರ್ತಲಾದಿಂದ 70 ಕಿ.ಮೀ. ಈಶಾನ್ಯಕ್ಕಿರುವ ಗಂಗಾನಗರದ ಬಿದ್ಯಾ ಕುಮಾರರ್ಪರದ ಘಟನೆಯಿಂದ ಸ್ಪಷ್ಟವಾಗುತ್ತದೆ.

ಗಂಗಾನಗರದ ಹತ್ತಿರವಿರುವ ದಟ್ಟ ಕಾಡಿನಲ್ಲಿದ್ದ T N V ಗುಂಪಿನ ನಾಗರಾಜ ಕೊಲೆಯ ಎಂಬ ಸದಸ್ಯ ತನ್ನ 7 ಜನ "ಸಂಗಾತಿ"ಗಳನ್ನು ಕೊಂದು ತ್ರಿಪುರಾದ PWD ಮಂತ್ರಿ ಬೈದ್ಯನಾಥ ಮುಜುಮುದಾರರಿಗೆ ಶರಣಾಗತನಾಗಿದ್ದು ಈತ ಆಧುನಿಕ ಶಸ್ತ್ರಾಸ್ತ್ರಗಳನ್ನು ಕಾಡಿನಲ್ಲಿ ಬಚ್ಚಿಟ್ಟು, ಅದರ ಬಗೆಗಿನ ಪುಸ್ತಿಕೆಗಳನ್ನೂ ಮತ್ತು TNV ಕ್ಯಾಂಪಿನ ವಿವರಗಳು, ಚಿತ್ರಗಳು ಹಾಗೂ ದಾಖಲೆಗಳನ್ನು ಮಂತ್ರಿಗಳಿಗೊಪ್ಪಿಸಿದ್ದಾನೆ. ಆಮೇಲೆ ಪೋಲಿಸರು ನಡೆಸಿದ ವಿಚಾರಣೆ, ತಪಾಸಣೆಗಳಿಂದ ಈ ಘಟನೆಗೆ ಪುಷ್ಟೀಕರಣ ಸಿಕ್ಕಿದೆ, ನಿರಪರಾಧಿ, ಗಂಡಸರು-ಹೆಂಗಸರ ಹತ್ಯೆ,ಡಕಾಯಿತಿ, ಹಣ ಕೇಳುವ ಮತ್ತು ಭಯೋತ್ಪಾದನೆಯ ಚಟುವಟಿಕೆಗಳಿಂದ ಬೇಸತ್ತಿದ್ದ ಈತ ಸಾಮಾನ್ಯ ಜೀವನಕ್ಕೆ ಮರಳಲು ಕಾಯುತ್ತಿದ್ದು, ತನ್ನ ರಾತ್ರಿ ಪಹರೆಯ ಅವಕಾಶವನ್ನು ಉಪಯೋಗಿಸಿಕೊಂಡ ಸಜೀವ ಪಾರಾಗಬೇಕಾದರೆ "ಸಂಗಾತಿ"ಗಳನ್ನು ಕೊಲ್ಲದೆ ಬೇರೆ ದಾರಿ ಇರಲಿಲ್ಲವೆಂದು ಈತ ಹೇಳಿಕೊಂಡಿದ್ದಾನೆ.

ಈಗಾಗಲೇ ಇಂತಹ ಎರಡು ಘಟನೆಗಳು ನಡೆದಿದ್ದು, TNV ಕ್ಯಾಂಪಿನಲ್ಲಿ ನಿರಾಶಾಭಾವನೆ, ಅಸಮಾಧಾನ ಬೆಳೆಯುತ್ತಿದೆ ಎಂದು ತಿಳಿದು ಬಂದಿದೆ. TNV ನಾಯಕರ ಜುಲುಮೆ ಮತ್ತು ಐಷಾರಾಮದ ಜೀವನ, ಗುಂಪಿನಲ್ಲಿ ಒಳಜಗಳಗಳು, ಗುರಿ ಮತ್ತು ವಿಧಾನಗಳ ಬಗ್ಗೆ ಭ್ರಮನಿರಸನ- ಇವುಗಳಿಂದಾಗಿ ಚಿತ್ತಗಾಂಗ್‌ನಲ್ಲಿರುವ TNV ಕ್ಯಾಂಪುಗಳಲ್ಲಿರುವ ಹಲವು ಯುವಕರು ಮರಳಲು ಸಿದ್ಧರಾಗಿದ್ದಾರೆ. ಆದರೆ ಜೀವಭಯದಿಂದಷ್ಟೆ ಅಲ್ಲಿ ಉಳಿದಿದ್ದಾರೆ. ಎಡರಂಗ ಸರ್ಕಾರ ತಪ್ಪು ದಾರಿ ಹಿಡಿದ ಯುವಕರಿಗೆ ಸರಿಪಡಿಸಿಕೊಳ್ಳಲು ಕೊಡುತ್ತಿರುವ ಅವಕಾಶ, ರಾಜಕೀಯ ಪ್ರಚಾರದ ಮೂಲಕ ತೀವ್ರಗಾಮಿಗಳನ್ನು ಎದುರಿಸುತ್ತಿರುವುದು ಸಹ ಈ ಯುವಕರ ಮೇಲೆ ಪರಿಣಾಮ ಬೀರಿದೆ.

ನಾಗರಾಜ್ ಕೊಲೊಯ್‌ಗೆ ಶರಣಾಗತನಾದದ್ದಕ್ಕೆ ಪುನರ್ವಸತಿಗೆ ಸಾಮಾನ್ಯವಾಗಿ ಕೊಡುವ ಪರಿಹಾರಧನವಲ್ಲದೆ ಸಾಹಸ ಕಾರ್ಯಕ್ಕೆ 20,000 ರೂ. ಬಹುಮಾನ ನೀಡಲಾಗಿದೆ. ○

ತಮಿಳುನಾಡು

ಶ್ರೀಲಂಕಾದಲ್ಲಿ ನರಮೇಧದ ವಿರುದ್ಧ ಬಂದ್

ಶ್ರೀ ಚಿದಂಬರಂ ನಾಯಕತ್ವದ ಸಮಿತಿಯ ಶ್ರೀಲಂಕಾ ಭೇಟಿ ಶ್ರೀಲಂಕಾ ಜನಾಂಗ ಸಮಸ್ಯೆಯ ಪರಿಹಾರದ ಆಸೆಗಳನ್ನೆಬ್ಬಿಸಿತ್ತು. ಆದರೆ ಸಮಿತಿ ಮಾತುಕತೆ ನಡೆಸುತ್ತಿದ್ದಂತೆ ಜಾಪ್ನಾ ಪಟ್ಟಣದ ತಮಿಳರ ಮೇಲೆ ವಾಯು ಪಡೆ, ನಾವಿಕ ಪಡೆ ಹಾಗೂ ಸೈನ್ಯದ ಮೂರೂ ಸಶಸ್ತ್ರ ದಳಗಳಿಂದ ನಾಗರಿಕರ ಮೇಲೆ ಬಾಂಬು ದಾಳಿ – ಆಸ್ಪತ್ರೆ, ಶಾಲೆಗಳೂ ಸೇರಿದಂತೆ – ತಮಿಳುನಾಡಿನ ಜನರನ್ನು ರೊಚ್ಚಿಗೆಬ್ಬಿಸಿದೆ, ಸಿ.ಪಿ.ಐ (ಎಂ) ರಾಜ್ಯಸಮಿತಿ ಸಿ.ಪಿ.ಐ ನಾಯಕರನ್ನು ಭೇಟಿ ಮಾಡಿ ಒಂದು ಜಂಟಿ ಹೇಳಿಕೆ ಹೊರಡಿಸಿತು. ಶ್ರೀಲಂಕಾದಲ್ಲಿ ತಮಿಳರ ನರಮೇಧ ಖಂಡಿಸಿದ್ದಲ್ಲದೆ, ನಿರಪರಾಧಿ ಜನರ ಕೊಲೆ ನಿಲ್ಲಿಸಲು ಮತ್ತು ಜನಾಂಗೀಯ ಸಮಸ್ಯೆಗೆ ಒಂದು ರಾಜಕೀಯ ಪರಿಹಾರ ಹುಡುಕಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಭಾರತ ಸರ್ಕಾರಕ್ಕೆ ಕರೆ ನೀಡಿತು. ಹೇಳಿಕೆ ಸರ್ವಪಕ್ಷೀಯ ಸಭೆ ಕರೆದು ಕಾರ್ಯಕ್ರಮ ಹಾಕಿಕೊಳ್ಳುವಂತೆ ರಾಜ್ಯ ಮುಖ್ಯ ಮಂತ್ರಿಗಳಿಗೆ ಕರೆ ನೀಡಿತು.

ಇದರ ನಂತರ ಡಿ. ಎಂ. ಕೆ. ಯ ನಾಯಕ ಕರುಣಾನಿಧಿ ಮೇ 31 ರಂದು ರಾಜ್ಯಾದ್ಯಂತ ಬಂದ್‌ಗೆ ಏಕಪಕ್ಷೀಯವಾಗಿ ಕರೆ ನೀಡಿದರು. ಈ ಹಿನ್ನೆಲೆಯಲ್ಲಿ AIADMK ನಾಯಕರ ಮೇಲೆ ಇನ್ನಷ್ಟು ಒತ್ತಾಯದ ಪರಿಣಾಮವಾಗಿ ಮೇ 29 ರಂದು ಸರ್ವಪಕ್ಷೀಯ ಸಭೆ ಕರೆಯಲು ಮುಖ್ಯಮಂತ್ರಿಗಳು ಒಪ್ಪಿಕೊಂಡರು. ಈ ಸಭೆಯಲ್ಲಿ ಡಿ. ಎಂ. ಕೆ. ಮತ್ತು ಡಿ.ಕೆ. ಬಿಟ್ಟು ಮತ್ತೆಲ್ಲಾ ಪಕ್ಷಗಳು ಭಾಗವಹಿಸಿದ್ದವು – ಇಂತಹ ಪ್ರಮುಖ ವಿಚಾರಗಳಲ್ಲಿ ಸರ್ವಪಕ್ಷೀಯ ಕಾರ್ಯಾಚರಣೆ ಮತ್ತು ಐಕ್ಯತೆಯ ಮಹತ್ವವನ್ನು ಒತ್ತಿ ಹೇಳಿ, ಈ ಸಭೆ ಶ್ರೀಲಂಕಾದಲ್ಲಿತಮಿಳರಕಗ್ಗೊಲೆಯನ್ನು ಕಟುವಾಗಿ ಖಂಡಿಸಿತು. ಸಮಸ್ಯೆ

(6ನೇ ಪುಟ ನೋಡಿ)

ಮಹಾರಾಷ್ಟ್ರ

ಡಿ. ವೈ.ಎಫ್. ಐ. ನ ರಾಜ್ಯ ಸ್ಥಾಪನಾ ಸಮ್ಮೇಳನ

ಮುಂಬೈಯಲ್ಲಿ ಮೇ 11 ರಿಂದ 13 ರ ವರೆಗೆ ನಡೆದ ಡಿ. ವೈ. ಎಫ್. ಐ. ನ ಮಹಾರಾಷ್ಟ್ರ ಸಮಿತಿಯ ಸ್ಥಾಪನಾ ಸಮ್ಮೇಳನ ಮಹಾರಾಷ್ಟ್ರದ ಯುವಜನತೆಯನ್ನು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಸಂಘಟಿಸುವಲ್ಲಿ ಒಂದು ಪ್ರಮುಖ ಹೆಜ್ಜೆ. ಮಹಾರಾಷ್ಟ್ರದ ಮುಂಬೈ ಹಾಗೂ ನಾಗಪುರ ನಗರಗಳಲ್ಲಿ ಡಿ. ವೈ. ಎಫ್. ಐ. ಘಟಕಗಳು 1981 ರಿಂದಲೇ ಕೆಲಸ ಮಾಡಲಾರಂಭಿಸಿದ್ದು ಕಳೆದೆರಡು ವರ್ಷಗಳ ಹೋರಾಟಗಳ ಫಲವಾಗಿ ಅದು ಹೊಸ ಹೊಸ ಜಿಲ್ಲೆಗಳಿಗೆ ವಿಸ್ತರಿಸಲಾರಂಭಿಸಿತು. ಪರಿಣಾಮವಾಗಿ ಆಗಸ್ಟ್ 1985 ರಲ್ಲಿ ಸಿದ್ಧತಾ ಸಮಿತಿ ರಚನೆಗೊಂಡಿತು.

ಮಹಾರಾಷ್ಟ್ರದ ಸುಪ್ರಸಿದ್ಧ ದಲಿತ ಪ್ರಗತಿಶೀಲ ಸಾಹಿತಿ ಪ್ರೊ|| ರಾವ್ ಸಾಹೇಬ್‌ಕಸಬೆ ಉದ್ಘಾಟಿಸಿದ ಈ ಸ್ಥಾಪನಾ ಸಮ್ಮೇಳದಲ್ಲಿ 12669 ಸದಸ್ಯರನ್ನು ಪ್ರತಿನಿಧಿಸಿದ 119 ಪ್ರತಿನಿಧಿಗಳು ಹಾಗೂ ವೀಕ್ಷಕರು ಭಾಗವಹಿಸಿದ್ದರು. ರಾಜ್ಯದ 30ರಲ್ಲಿ 15 ಜಿಲ್ಲೆಗಳಲ್ಲಿ ಡಿ.ವೈ.ಎಫ್.ಐ. ಘಟಕಗಳಿವೆ. ಈ ಸಮ್ಮೇಳನದ ಮೂರು ದಿನಗಳಲ್ಲಿ ಉಂಟಾಗಿರುವ ಉತ್ಸಾಹದ ವಾತಾವರಣ ಮಹಾಪೂರದಲ್ಲಿ ಯುವಜನರ ಸಂಘಟನೆಯ ಭವ್ಯ ಭವಿಷ್ಯದ ಸೂಚನೆಯೆಂದು ಹೇಳಲಾಗುತ್ತಿದೆ.

ಎಂ. ವಿ. ರಾಘವನ್‌ರವರ ಬಗ್ಗೆ ಕೇರಳ ರಾಜ್ಯಸಮಿತಿ ನಿರ್ಣಯ

ಕೇರಳ ರಾಜ್ಯ ಸಮಿತಿ ಜೂನ್ 22 ಮತ್ತು 23 ರಂದು ಸೇರಿದಾಗ ಪಕ್ಷದಿಂದ ಸಸ್ಪೆಂಡ್ ಆಗಿದ್ದ ರಾಘವನ್‌ರವರನ್ನು ಹೊರಗೆ ಹಾಕಲು ಮಾಡಿದ ತೀರ್ಮಾನವನ್ನು ಕೇಂದ್ರ ಸಮಿತಿ ಅನುಮೋದಿಸಿದೆ. ಪತ್ರಿಕಾ ಗೋಷ್ಠಿಯಲ್ಲಿ ಈ ಬಗ್ಗೆ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ಕಾ. ಇ. ಎಂ. ಎಸ್. ರವರು ರಾಘವನ್‌ರವರ ಜೊತೆ ಇರುವ ಪಕ್ಷದ ಸದಸ್ಯರು ಅಭಿಮಾನಿಗಳು ಅವರ ಧೋರಣೆಯ ಅಪಾಯವನ್ನರಿಯಬೇಕೆಂದು ಕರೆ ನೀಡಿದ್ದಾರೆ.

ಈ ಬಗ್ಗೆ ಕೇರಳ ರಾಜ್ಯ ಸಮಿತಿ ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯದ ಸಾರಾಂಶ ಹೀಗಿದೆ :

ಪಕ್ಷ 12ನೇ ಕಲ್ಕತ್ತಾ ಮಹಾಧಿವೇಶನ ಕೇರಳದಲ್ಲಿನ ಬೆಳವಣಿಗೆಗಳನ್ನು ಗಮನಿಸಿ,

ಒಂದನೆಯದಾಗಿ, ಎಂ. ವಿ. ರಾಘವನ್‌ರವರ ನಾಯಕತ್ವದಲ್ಲಿಕೆಲವು ಸಂಗಾತಿಗಳು ರಾಜ್ಯ ಸಮ್ಮೇಳನದಲ್ಲಿ ತೆಗೆದುಕೊಂಡ ರಾಜಕೀಯ ನಿಲುವು ಸಂಸದೀಯ ಭ್ರಮೆಗಳಿಗೆ ಹಾಗೂ ಜಾತೀವಾದಿ ರಾಜಕೀಯಕ್ಕೆ ನೇರವಾಗಿ ತುತ್ತಾದ ಪರಿಣಾಮ.

ಎರಡನೆಯದಾಗಿ, ಅವರು ರಾಜ್ಯದ ಬಹಳಷ್ಟು ಸಂಗಾತಿಗಳು ಕೇಂದ್ರ ಸಮಿತಿಯ ಮಾರ್ಗದರ್ಶನದಲ್ಲಿ ಸರಿಯಾದ ಅಭಿಪ್ರಾಯಕ್ಕೆ ಬಂದುದನ್ನು ಕಂಡು ತಮ್ಮ ನಿಲುವಿಗೆ ಬಂದ ಅಪಾಯವನ್ನು ಮನಗಂಡು ಗುಂಪು ರಾಜಕೀಯಕ್ಕೆ ಕೈಹಾಕಿದರು. ಕೇರಳ ರಾಜ್ಯ ಸಮ್ಮೇಳನ ಅವರ ಗುಂಪು ರಾಜಕೀಯ ವೇದಿಕೆಯಾಯಿತು ಎಂಬ ತೀರ್ಮಾನಕ್ಕೆ ಬಂದಿತು. ಆ ಸಮಯದಲ್ಲಿ ಅಲ್ಲಿಯೇ ಇದ್ದ ರಾಘವನ್‌ರವರು ಈ ಸಂಗತಿಗಳನ್ನು ವಿರೋಧಿಸಲಿಲ್ಲ.

ಪಕ್ಷದ ಮಹಾಧಿವೇಶನ ಕೇಂದ್ರ ಸಮಿತಿಗೆ ಸೂಕ್ತವಾದ ರಾಜಕೀಯ ಹಾಗೂ ಸಂಘಟನಾತ್ಮಕ ಕ್ರಮಗಳನ್ನು ಜರುಗಿಸಲು ಆದೇಶ ನೀಡಿತು. ನಂತರ ನಡೆದ ರಾಜ್ಯಸಮಿತಿ ಸಭೆಯಲ್ಲಿ ರಾಘವನ್‌ರವರು, ರಾಜ್ಯ ಸಮ್ಮೇಳನದಲ್ಲಿ ತಾವು ಮಂಡಿಸಿದ ಪರ್ಯಾಯ ಗೊತ್ತುವಳಿಯ (ರಾಜ್ಯಸಮಿತಿ, ಹಾಗೂ ಕೇಂದ್ರ ಸಮಿತಿಯ ಅಪ್ಪಣೆಯಿಲ್ಲದೆ ತೆಗೆದ)170 ಪ್ರತಿಗಳನ್ನು ವಿನಿಯೋಗ ಮಾಡಿದರೆಂಬ ಬಗ್ಗೆ ಪ್ರಾಮಾಣಿಕವಾಗಿ ನಿಜ ಹೇಳಲು ಸಿದ್ಧರಿರಲಿಲ್ಲ. ಆದುದರಿಂದ ಅತ್ಯಂತ ತೀಕ್ಷ್ಣವಾದ ಪಕ್ಷದಿಂದ ಹೊರಗೆ ಹಾಕುವುದಕ್ಕೆ ಸ್ವಲ್ಪಮಾತ್ರ ಕಡಿಮೆಯದಾದ, ಒಂದು ವರ್ಷ ಕಾಲದ ಸಸ್ಪೆನ್‌ಷನ್ ವಿಧಿಸಿತು. ನಂತರವೂ ರಾಘವನ್‌ರವರು ತಾವು ಮೊದಲು ಮಾಡಿದ್ದ ಗುಂಪುಗಾರಿಕೆಯನ್ನೇ ಮತ್ತೇ ಮುಂದುವರಿಸಿದ್ದಾರೆಂಬ ಬಗ್ಗೆ ಜಿಲ್ಲಾ ಸಮಿತಿಗಳಿಂದ ವರದಿಗಳು ಬಂದವು ಹಾಗೂ ಕಾರ್ಯದರ್ಶಿ ಮಂಡಲದ ಸದಸ್ಯರ ಹಾಗೂ ಸ್ವತಃ ಕಾರ್ಯದರ್ಶಿಯವರ ಗಮನಕ್ಕೆ ಬಂದಿತು. ಈ ಬಗ್ಗೆ ಮೆ 28 ರಂದು ಕೇಳಿದ ವಿವರಣೆಗೆ ಜೂನ್ 10ರಂದು ಅವರು ಉತ್ತರ ನೀಡಿದರು.

ಈಮಧ್ಯೆ ಕೇರಳದ ಶಬ್ದಂ ಪತ್ರಿಕೆಗೆ ಪಕ್ಷದ ಧೋರಣೆಗೆ ಸವಾಲು ಹಾಕುವ ಸಂದರ್ಶನವೊಂದನ್ನು ನೀಡಿದರು. ರಾಜ್ಯಸಮಿತಿಗೆ ನೀಡಿದ ಉತ್ತರದಲ್ಲಿ ಪಕ್ಷದ ಮಹಾಧಿವೇಶನ ಅಂಗೀಕರಿಸಿದ ರಾಜಕೀಯ ನೀತಿಯನ್ನು, ಹಳೆಯ ಪರಿಷ್ಕರಣವಾದಿ ಧೋರಣೆಯನ್ನು ಪಕ್ಷದ ಮೇಲೆ ಹೇರುವ ಪ್ರಯತ್ನ, ಅದನ್ನು ವಿರೋಧಿಸಿ ಸೋಲಿಸುವುದರಿಂದಲೇ ಪಕ್ಷ ಕ್ರಾಂತಿಕಾರಿ ಸಾಮೂಹಿಕ ಪಕ್ಷವಾಗಿ ಬೆಳೆಯಬಲ್ಲುದು ಎಂದಿದ್ದಾರೆ. ಸ್ವತಃ ರಾಘವನ್‌ರವರೂ ಕೂಡ, ಈ ಹಿಂದೆ ಪಕ್ಷದ ಧೋರಣೆಗೆ ಸವಾಲೆಸೆಯುವ ಇಂತಹ ಮಾತನ್ನಾಡಿರಲಿಲ್ಲ. ಅಲ್ಲದೆ ಶರಿಯತ್ ಅನ್ನು ವಿರೋಧಿಸುವುದು ಪಕ್ಷವನ್ನು ಮುಸ್ಲಿಂ ಜನಸಮೂಹಗಳಿಂದ ಬೇರೆ ಮಾಡುತ್ತದೆ ಎಂಬುದೂ ಅವರ ನಿಲುವಾಗಿತ್ತು.

ರಾಘವನ್‌ರವರನ್ನು ಪಕ್ಷದಿಂದ ಹೊರಗೆ ಹಾಕುವ ನಿರ್ಣಯ, ಈ ಹಿಂದೆ ಸಿ. ಪಿ. ಐ. (ಎಂ) ನಲ್ಲಿ ನಾನೊಬ್ಬನೇ ಸರಿ, ಇಡೀ ಪಕ್ಷ ತಪ್ಪು ಎಂದವರಾರೂ ಇರಲಿಲ್ಲ ಎನ್ನುತ್ತದೆ.

ರಾಜ್ಯಸಮಿತಿಗೆ ಅವರು ನೀಡಿದ ಉತ್ತರದಲ್ಲಿ ಪಕ್ಷದ ಧೋರಣೆ ಹಾಗೂ ಸಂಘಟನಾತ್ಮಕವಾಗಿ 12ನೆಯಮಹಾಧಿವೇಶನದ ನಿರ್ಣಯವನ್ನು ಉಲ್ಲಂಘಿಸುವ ನಿಲುವನ್ನು ತೆಗೆದುಕೊಂಡು ಪಕ್ಷದ ಸದಸ್ಯರಾಗುವ ಹಕ್ಕಿಗೆ ಚ್ಯುತಿ ತಂದು ಕೊಂಡಿದ್ದಾರೆ. ಆದುದರಿಂದ ರಾಜ್ಯಸಮಿತಿ ರಾಘವನ್‌ರವರನ್ನು ಪಕ್ಷದಿಂದ ಹೊರಗೆ ಹಾಕಬೇಕೆಂದು ನಿರ್ಣಯಿಸಿದೆ ಎನ್ನುತ್ತದೆ. ○

ಜೀವವಿಮಾ ನೌಕರರಿಂದ ಬರ ಪರಿಹಾರ –

ಸೋಲಿಗರ ಹಳ್ಳಿಯಲ್ಲಿ

ಕೊಳ್ಳೆಗಾಲ-ಹುಣಸೂರು ರಸ್ತೆಯಲ್ಲಿ ಅರುವತ್ತು ಕಿಲೋಮೀಟರ್ ದೂರ ಮೋಟಾರು ರಸ್ತೆಯಲ್ಲಿ ಸಾಗಿದರೆ ಒಡೆಯರ ಪಾಳ್ಯವೆಂಬ ಪುಟ್ಟ ಹಳ್ಳಿ ಸಿಗುತ್ತದೆ. ಅಲ್ಲಿಂದ ಮುಂದೆ ಗುಡ್ಡಬೆಟ್ಟಗಳ ಮಾರ್ಗವಾಗಿ ಟಿಬೇಟಿಯನ್ ನಿರಾಶ್ರಿತರ ವಸತಿಯನ್ನು ದಾಟಿ ಹತ್ತು ಕಿಲೋಮೀಟರ್ ಕಾಲ್ನಡಿಗೆಯಲ್ಲಿ ಸಾಗಿದರೆ ಬಿಳಿಗಿರಿ ರಂಗನ ಬೆಟ್ಟದ ಸಮೀಪ ಹಿರಿಯೆಂಬಳವೆಂಬ ಕುಗ್ರಾಮವೊಂದನ್ನು ಸೇರಬಹುದು. ಈ ಹಳ್ಳಿಗೆ ವಾಹನ ಸಂಪರ್ಕ ಇಲ್ಲ, ಈ ಕಗ್ಗಾಡಿನಲ್ಲಿ ಸೋಲಿಗರೆಂಬ ಬುಡಕಟ್ಟು ಜನಾಂಗಕ್ಕೆಸೇರಿದನೂರುಕುಟುಂಬಗಳು ವಾಸಿಸುತ್ತಿವೆ. ಈ ಜನಗಳ ಪಾಲಿಗೆ ನಾಗರೀಕತೆಯೆನ್ನುವುದು ಶತಮಾನಗಳಷ್ಟು ದೂರ. ದೇಶಕ್ಕೆ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳಾಗುತ್ತಿದ್ದರೂ ಈ ಜನರ ಪಾಲಿಗೆ ಬದುಕು ಇನ್ನೂ ಶಾಪವಾಗೇ ಉಳಿದಿದೆ. ಇವರ ಹೆಣ್ಣು ಮಕ್ಕಳಿಗೂ ಮೈ ಮುಚ್ಚಿಕೊಳ್ಳಲು ಸಾಕಷ್ಟು ಬಟ್ಟೆಯೂ ಸಿಗುತ್ತಿಲ್ಲ. ಮಕ್ಕಳು ಹೊಟ್ಟೆ ತುಂಬಾ ಎಂದೂ ಉಣ್ಣುವುದಿಲ್ಲ. ಅರೆ ಹೊಟ್ಟೆ ಮತ್ತು ಅರೆನಗ್ನ ದೇಹ ಹೊತ್ತ ಈ ಮಂದಿ ಒಮ್ಮೊಮ್ಮೆ ಅರಣ್ಯ ಪ್ರದೇಶದಲ್ಲಿ ಸಾಗುವಳಿ ಮಾಡುವುದಿದೆ. ಅದಕ್ಕಾಗಿ ಅವರು ಅರಣ್ಯ ಅಧಿಕಾರಿಗಳ ದಯೆಯನ್ನು ಅವಲಂಬಿಸಿರಬೇಕು. ಉಳಿದ ವೇಳೆ ಪಕ್ಕದ ಟಿಬೇಟಿಯನ್ ವಸತಿಯಲ್ಲಿ ದಿನಕ್ಕೆ ನಾಲ್ಕು ರೂಪಾಯಿಗೆ ಮೀರದಷ್ಟು ಕೂಲಿಗಾಗಿ ಮೈಮುರಿದು ದುಡಿಯಬೇಕಾಗುತ್ತದೆ. ಸರಕಾರದ ೭೦ ಅಂಶ ಕಾರ್ಯಕ್ರಮ, ಸಾಲ ವಿತರಣೆ ಇತ್ಯಾದಿ ಘೋಷಣೆಯ ಕಾರ್ಯಕ್ರಮಗಳೆಲ್ಲ ಈ ಕಡುಬಡವರ ಬಳಿಗೆ ಯಾವತ್ತೂ ಸುಳಿದಿಲ್ಲ. ಹೊಸ ತಾಂತ್ರಿಕತೆಯ ವಿಮಾನ ಏರಿ ಇಪ್ಪತ್ತೊಂದನೆಯ ಶತಮಾನಕ್ಕೆ ಧಾವಿಸಬೇಕಾದ ಭಾರತದ ಹೃದಯದೊಳಗೆ ಮಧ್ಯಯುಗಕ್ಕೆ ಸೇರಿದ ಹಿರಿಯೆಂಬಳದ ಸೋಲಿಗರೂ ಇದ್ದಾರೆ ಎನ್ನುವುದು ರಾಜೀವ ಗಾಂಧಿಗೆ ಎಂದಾದರೂ ಅರ್ಥವಾದೀತೆ ?

ಇಂತಹ ಕಗ್ಗಾಡಿನಲ್ಲಿ ಬದುಕಿರುವ ಈ ಬುಡಕಟ್ಟು ಜನರ ಬಳಿಗೆ ಮೈಸೂರು ಜಿಲ್ಲೆಯ ಬೇರೆಬೇರೆ ಶಾಖೆಗಳಲ್ಲಿ ದುಡಿಯುವ ಜೀವವಿಮಾ ನೌಕರರತಂಡವೊಂದುಇತ್ತೀಚೆಗೆ ಪಾದಯಾತ್ರೆ ಮಾಡಬೇಕಾಯಿತು. ಬರಪರಿಹಾರ ನಿಧಿಗಾಗಿ ವಿಮಾ ಕಾರ್ಪೊರೇಷನ್ ನೌಕರರ ಸಂಘ, ಬೆಂಗಳೂರು ವಿಭಾಗದವರು ಸಂಗ್ರಹಿಸಿದ್ದ ಕಿಂಚಿತ್ ಹಣದಲ್ಲಿ ತೀರಾ ಹಿಂದುಳಿದಿರುವ ಪ್ರದೇಶದ ಈ ಜನರಿಗಾಗಿ ಆಹಾರಧಾನ್ಯ ವಿತರಣೆ ಮಾಡುವ ಕಾರ್ಯಕ್ರಮವನ್ನು ವಿಮಾ ಕಾರ್ಪೊರೇಷನ್ ನೌಕರರ ಸಂಘ ಹಮ್ಮಿಕೊಂಡಿತ್ತು. ಸಂಘದ ಅಧ್ಯಕ್ಷ ಕಾ. ಕೆ. ವಿ. ಶ್ರೀನಿವಾಸನ್ ಮತ್ತು ಜತೆ ಕಾರ್ಯದರ್ಶಿ ಕಾ. ಭಾಸ್ಕರ ಸೋಮಯಾಜಿ ಅವರ ನೇತೃತ್ವದಲ್ಲಿ ಹಿರಿಯೆಂಬಳಕ್ಕೆಕಾಲ್ನಡಿಗೆಯಲ್ಲಿ ಸಾಗಿದ ಈ ತಂಡದಲ್ಲಿ ಇಬ್ಬರು ಮಹಿಳಾ ಸಂಗಾತಿಗಳನ್ನೂ ಒಳಗೊಂಡು ಮೂವತ್ತು ಮಂದಿ ಕಾರ್ಯಕರ್ತರಿದ್ದರು. ತಂಡವು ತನ್ನೊಂದಿಗೆ ಒಯ್ದಿದ್ದ ೧3ಕ್ವಿಂಟಾಲ್ ರಾಗಿಯನ್ನು ಪ್ರತಿ ಕುಟುಂಬಕ್ಕೆ ಸುಮಾರು 50 ಕೆ. ಜಿ. ಯಂತೆ ವಿತರಣೆ ಮಾಡಿತು. ಈ ಸಂಬಂಧ ನಡೆದ ಪುಟ್ಟ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಸಿಂಡಿಕೇಟ್‌ಬ್ಯಾಂಕ್, ಒಡೆಯರ ಪಾಳ್ಯ ಶಾಖೆಯ ಮೆನೇಜರ್ ಅವರು ವಹಿಸಿದ್ದರು. ಸಭೆಯಲ್ಲಿ ಕಾ.ಕೆ.ವಿ. ಶ್ರೀನಿವಾಸನ್ ನಗರಪ್ರದೇಶದಲ್ಲಿರುವ ಕಾರ್ಮಿಕ ವರ್ಗ ಗ್ರಾಮಾಂತರ ಪ್ರದೇಶದ ರೈತಾಪಿ ಜನತೆ ಮತ್ತು ಕೃಷಿ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸಿ ಅವರ ನೆರವಿಗೆ ಬರುವ ಮೂಲಕ ರೈತ-ಕಾರ್ಮಿಕ ಸಖ್ಯತೆಯನ್ನು ಬಲಪಡಿಸಬೇಕಾದದು ಅವರ ಕರ್ತವ್ಯವೆಂದರಲ್ಲದೆ ಈ ಪರಿಹಾರ ಕಾರ್ಯಕ್ರಮ ಆ ದಿಸೆಯಲ್ಲಿ ಒಂದು ಪುಟ್ಟ ಹೆಜ್ಜೆ ಎಂದರು. ವಿಮಾ ಕಾರ್ಪೊರೇಶನ್ ನೌಕರರ ಸಂಘದ ಕೊಳ್ಳೇಗಾಲ ಶಾಖೆಯಅಧ್ಯಕ್ಷ ಕಾ. ಜಿ. ಎಸ್. ಕೆ. ಅಯ್ಯರ್ ಅವರು ಸ್ವಾಗತಿಸಿದ್ದ ಈ ಸಮಾರಂಭದಕೊನೆಗೆ ಕೆ. ಶಾಂತರಾಜು ಅವರು ವಂದನಾರ್ಪಣೆ ಮಾಡಿದರು.

ರೈತ ಸಂಘದಿಂದ ಬಸ್ ಸೌಕರ್ಯ

ಮಾನ್ವಿ ತಾಲೂಕಿನ ಜಂಬಲದಿನ್ನಿ, ಗಡ್ಡೆರಾಯನಕ್ಯಾಂಪ್, ಜೌಗಭಾವಿಗಳಿಗೆ ಬಸ್ ಸೌಕರ್ಯವಿಲ್ಲದೆ ಆ ಹಳ್ಳಿಗಳ ನಿವಾಸಿಗಳು ತುಂಬಾ ತೊಂದರೆಗೊಳಗಾಗಿದ್ದರು. ಈ ಸಮಸ್ಯೆಯನ್ನು ಗಮನಕ್ಕೆ ತೆಗೆದುಕೊಂಡ ಕರ್ನಾಟಕ ಪ್ರಾಂತ ರೈತ ಸಂಘದ ಮಾನ್ವಿ ತಾಲೂಕು ಘಟಕ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಡದಿದ್ದಲ್ಲಿ ಜೂನ್ 30 ರಂದು 'ರಸ್ತೆ ರೋಕೋ' ಚಳವಳಿ ನಡೆಸುವುದಾಗಿ ರೈತಸಂಘವು ತಿಳಿಸಿತ್ತು. ಇದರಿಂದ ಚುರುಕಾದ ಅಧಿಕಾರಿಗಳು ಜೂನ್ 30 ರಿಂದ ಆ ಹಳ್ಳಿಗಳಿಗೆ ಬಸ್‌ಸೌಕರ್ಯವನ್ನು ಒದಗಿಸಿದ್ದಾರೆ. ಎಂಬುದಾಗಿ ಮಾನ್ವಿ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾ. ದಾ॥ ಬಾಲಚಂದ್ರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೊಸ ಜವಳಿ ನೀತಿಗೆ ಪ್ರತಿಭಟನೆ

ದೊಡ್ಡಬಳ್ಳಾಪುರ ಬಂದ್

ಕೇಂದ್ರ ಸರಕಾರದ ಹೊಸ ಜವಳಿ ನೀತಿಯನ್ನು ಪ್ರತಿಭಟಿಸಿ 3-7-86 ರಂದು ದೊಡ್ಡಬಳ್ಳಾಪುರ ಬಂದ್‌ಗೆ ಸಿ.ಪಿ.ಐ. (ಎಂ) ನ ಸ್ಥಳೀಯ ಶಾಖೆಗಳು ನೀಡಿದ ಕರೆಗೆ ಓಗೊಟ್ಟ ಅಲ್ಲಿನ ಎಲ್ಲ ವಿಭಾಗಗಳಜನತೆ "ಬಂದ್"ಕರೆಗೆ ತಮ್ಮ ಬೆಂಬಲವನ್ನು ನೀಡಿ ಬಂದನ್ನು ಯಶಸ್ವಿಗೊಳಿಸಿದರು. ಅಂದು ಹೋಟೆಲ್, ಸಿನೆಮಾ, ಅಂಗಡಿಗಳು, ಪವರ್‌ಲೂಂಗಳು ಸಂಪೂರ್ಣ ಮುಚ್ಚಿದ್ದವು. ಅದೇ ದಿನ ಸಂಜೆ ಕಾರ್ಮಿಕರ ಮತ್ತು ಪವರ್‌ಲೂಂ ನೌಕರರ ಮೆರವಣಿಗೆ ದೊಡ್ಡಬಳ್ಳಾಪುರದ ಮುಖ್ಯ ಬೀದಿಗಳಲ್ಲಿ ನಡೆದು ಟೌನ್‌ಹಾಲ್ ಆವರಣದಲ್ಲಿ ಬಹಿರಂಗಸಭೆ ನಡೆಯಿತು. ಸುಮಾರು ನಾಲ್ಕು ಸಾವಿರ ಜನ ಕಿಕ್ಕಿರಿದು ನೆರೆದಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಕಾ. ಹೆಚ್. ಮುಗುವಾಳಪ್ಪನವರು ವಹಿಸಿದ್ದರು. ಮುಖ್ಯ ಭಾಷಣಕಾರರಾಗಿ ಬಂದಿದ್ದ ಕಾ. ಸೂರಿಯವರು ಮಾತನಾಡಿ ಕೇಂದ್ರ ಸರ್ಕಾರದ ಹೊಸ ಜವಳಿ ನೀತಿಯಿಂದಾಗಿ ಲಕ್ಷಾಂತರ ಜವಳಿ ಕಾರ್ಮಿಕರು ಬೀದಿ ಪಾಲಾಗಲಿದ್ದಾರೆಂದು ನಮ್ಮ ಪಕ್ಷ ಹಿಂದೆಯೇ ಎಚ್ಚರಿಸಿದ್ದು ಈಗ ನಿಜವಾಗುತ್ತಿದೆ ಎಂದು ಹೇಳಿದರು. ಕೇಂದ್ರ ಸರ್ಕಾರದ ಈ ಜನವಿರೋಧಿ ನೀತಿಗೆದುರಾಗಿ ರಾಜ್ಯದ ಎಲ್ಲಾ ಜನತೆ ಒಗ್ಗಟ್ಟಿನಿಂದಹೋರಾಡಬೇಕೆಂದು ಕರೆ ನೀಡಿದರು. ಕಾ. ಕೃಷ್ಣಮೂರ್ತಿಯವರು ಹೊಸ ಜವಳಿ ನೀತಿಯಿಂದಾಗಿ ಪವರ್‌ಲೂಂಉದ್ದಿಮೆಗೆ ಒದಗಲಿರುವ ಗಂಡಾಂತರವನ್ನು ಕುರಿತು ವಿವರಿಸಿದರು. ಕಾ. ಹೇಮಂತರಾಜ್ ಅವರು ಧನ್ಯವಾದಗಳನ್ನರ್ಪಿಸಿದರು.

ಪೊಲಿಟ್ ಬ್ಯೂರೋ ಕರೆ

ಕೋಮುವಾರು ಮತ್ತು ಛಿದ್ರಕಾರಿ ಶಕ್ತಿಗಳನ್ನು ಸೋಲಿಸಿ

ಜೂನ್ ೧೮–೧೯ರಂದು ಸಭೆ ಸೇರಿದ ಸಿ ಪಿ ಐ (ಎಂ) ಪೊಲಿಟ್ ಬ್ಯೂರೋ ದಿನೇ ದಿನೇ ಹದಗೆಡುತ್ತಿರುವ ದೇಶದ ಸಮಸ್ಯೆಗಳ ಬಗೆಗೆ ಬೆಳಕು ಚೆಲ್ಲಿದೆ.

ವಿದ್ರೋಹಕಾರಿ ಗೂರ್ಖಾ ಚಳುವಳಿ

ದೇಶಾದ್ಯಂತ ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳ ಅಟ್ಟಹಾಸ ಹೆಚ್ಚುತ್ತಿರುವುದರ ಕುರಿತು ಪೊಲಿಟ್ ಬ್ಯೂರೋ ಕಳವಳ ವ್ಯಕ್ತಪಡಿಸಿದೆ. ಮುಸ್ಲಿಂ ಮಹಿಳೆಯರ ಜೀವನಾಂಶದ ಪ್ರಶ್ನೆಯಲ್ಲಿ ಕೇಂದ್ರ ಸರಕಾರ ಮುಸ್ಲಿಂ ಮೂಲಭೂತವಾದಿಗಳ ಒತ್ತಡಕ್ಕೆ ಮಣಿದಿದೆ. ಇದು ಹಿಂದೂ ಕೋಮುವಾದಿಗಳನ್ನು ಸಾಕಷ್ಟು ಉದ್ರೇಕಿಸಿ ಅವರೂ ತಮ್ಮ ಚಟುವಟಿಕೆಯನ್ನು ವಿಸ್ತರಿಸುವಂತೆ ಮಾಡಿದೆ. ಸಾಮ್ರಾಜ್ಯಶಾಹಿ ಹಸ್ತಕರಾಗಿರುವ ಅನೇಕ ಸಂಸ್ಥೆಗಳು ಈ ಪರಿಸ್ಥಿತಿಯನ್ನು ಬಳಸಿಕೊಂಡು ದೇಶದಲ್ಲಿ ಅಸ್ಥಿರತೆಯುಂಟು ಮಾಡುತ್ತಿವೆ. ಜನತೆಯ ಐಕ್ಯತೆಗೆ ಭಂಗತರುತ್ತಿವೆ.

ಇತ್ತೀಚೆಗೆ ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆ ಮತ್ತು ಅದರ ಆಸುಪಾಸಿನಲ್ಲಿ ನಡೆದ ಗೂರ್ಖಾ ಚಳುವಳಿ ಇದಕ್ಕೊಂದು ನಿದರ್ಶನ. ಕಳೆದ ಹಲವು ದಶಕಗಳಿಂದ ನೇಪಾಲಿ ಭಾಷೆ ಮಾತನಾಡುವ ಜನರ ಹಕ್ಕುಗಳಿಗಾಗಿ ಹೋರಾಟ ನಡೆಸಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ನೇತೃತ್ವದಲ್ಲಿರುವ ಎಡರಂಗ ಸರಕಾರ. ನೇಪಾಲಿ ಭಾಷೆಗೆ ಮಾನ್ಯತೆ ನೀಡಬೇಕೆಂದೂ ಶಿಕ್ಷಣ ಮತ್ತು ಆಡಳಿತ ರಂಗದಲ್ಲಿ ಅದು ಬಳಕೆಯಾಗಬೇಕೆಂದೂ ಎಡರಂಗ ಪ್ರಯತ್ನಿಸುತ್ತಿದೆ. ಈ ನಡುವೆ ಸಂಶಯಾಸ್ಪದ ಮೂಲಗಳಿಂದ ಅಪಾರ ಹಣ ಪಡೆಯುತ್ತಿರುವ ಕೆಲವು ಪ್ರತ್ಯೇಕವಾದಿ ಸಂಸ್ಥೆಗಳು ನೇಪಾಳಿಗಳಿಗೆ ಪ್ರತ್ಯೇಕ ರಾಜ್ಯಬೇಕೆಂದು ಗುಲ್ಲು ಮಾಡುತ್ತಿವೆ. ಸಮಯ ಸಾಧಕತನಕ್ಕೆ ಹೆಸರಾಗಿರುವ ಪಶ್ಚಿಮ ಬಂಗಾಳದ ಕೆಲವರು ಕಾಂಗ್ರೆಸ್ ಮುಖಂಡರೂ ಆರಂಭದಲ್ಲಿ ಈ ಚಳುವಳಿಗೆ ಬೆಂಬಲ ನೀಡಿದ್ದರು. ಆದರೆ ಪ. ಬಂಗಾಳದ ಜನತೆ ಮತ್ತು ಪ್ರಜಾಪ್ರಭುತ್ವವಾದಿ ನೇಪಾಳಿ ಜನ ಈ ಹೋರಾಟಕ್ಕೆ ಸೋಲುಂಟು ಮಾಡಿರುವುದು ಸ್ವಾಗತಾರ್ಹ. ಇದಕ್ಕಾಗಿ ಪೊಲಿಟ್ ಬ್ಯೂರೋ ಅವರನ್ನು ಅಭಿನಂದಿಸಿದೆ.

ರಾಜ್ಯ ಘಟಕಗಳಿಗೆ ಪಿ. ಬಿ. ಅಭಿನಂದನೆ

ಗಡಿ ಸಮಸ್ಯೆಯ ಪರಿಹಾರಕ್ಕಾಗಿ ಗ್ರಾಮವನ್ನು ಘಟಕವಾಗಿ ಪರಿಗಣಿಸಬೇಕು ಮತ್ತು ಯಾವುದೇ ರಾಜ್ಯಕ್ಕೆ ಭೌಗೋಳಿಕವಾಗಿ ನಿಕಟವಾಗಿರುವ ಪ್ರದೇಶದಲ್ಲಿ ಬಹುಸಂಖ್ಯಾತ ಜನರು ಯಾವ ಭಾಷೆ ಆಡುತ್ತಾರೆ ಎಂಬ ಪ್ರಶ್ನೆಯ ಆಧಾರದಲ್ಲಿ ಸಮಸ್ಯೆ ಬಗೆಹರಿಸಲ್ಪಡಬೇಕು ಎನ್ನುವುದು ನಮ್ಮ ಪಕ್ಷದ ಅಂಗೀಕೃತ ನಿಲುವು. ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದಲ್ಲಿ ಕಾಂಗ್ರೆಸ್ಸನ್ನೂ ಒಳಗೊಂಡಂತೆ ಇತರ ರಾಜಕೀಯ ಪಕ್ಷಗಳು ಸಂಕುಚಿತ ಪ್ರಾದೇಶಿಕ ವಾದಕ್ಕೆ ಬಲಿಬಿದ್ದಿರುವುದು ಶೋಚನೀಯ. ಮಹಾರಾಷ್ಟ್ರದ ಕೆಲವು ವಿರೋಧಪಕ್ಷಗಳಂತೂ ಶಿವಸೇನೆಯ ತಾಳಕ್ಕೆ ತಕ್ಕಂತೆ ಕುಣಿದಿರುವುದು ಅವಮಾನಕರ. ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿನ ನಮ್ಮ ಪಕ್ಷದ ರಾಜ್ಯ ಘಟಕಗಳು ಇಂತಹ ಸಂಕುಚಿತ ಪ್ರಾದೇಶಿಕ ಭಾವನೆಗಳಿಂದ ದೂರವಿದ್ದು ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯ ಭಾವನೆಯನ್ನು ಎತ್ತಿ ಹಿಡಿದಿವೆ. ಇದಕ್ಕಾಗಿ ಈ ಎರಡೂ ರಾಜ್ಯಘಟಕಗಳನ್ನು ಪಿ. ಬಿ. ಅಭಿನಂದಿಸಿದೆ.

ಕೇರಳದಲ್ಲಿ ಕಾಂಗ್ರೆಸ್(ಐ) ಶರಣಾಗತಿ

ರಾಷ್ಟ್ರದ ಹಿತಕ್ಕೆ ಮಾರಕವಾಗುವಂತಹ ಮಾತುಗಳನ್ನು ಆಡಿದುದಕ್ಕಾಗಿ ಸರಕಾರದಿಂದ ಕಿತ್ತೆಸೆಯಲ್ಪಟ್ಟ ಬಾಲಕೃಷ್ಣ ಪಿಳ್ಳೆಯನ್ನು ಮತ್ತೊಮ್ಮೆ ಮಂತ್ರಿಪದವಿಗೇರಿಸುವ ಮುಖಾಂತರ ಕಾಂಗ್ರೆಸ್ (ಐ) ಕೇರಳದಲ್ಲಿ ದೇಶದ್ರೋಹಿ ಮತ್ತು ಪ್ರತಿಗಾಮಿ ಶಕ್ತಿಗಳಿಗೆ ಶರಣಾಗಿದೆ. ಸಂಶಯಾಸ್ಪದ ಚಾರಿತ್ರ್ಯವುಳ್ಳ ವಿದೇಶೀಯರಿಗೆ ಕೇರಳದಲ್ಲಿ ಆತಿಥ್ಯ ನೀಡಿದ ಇಬ್ಬರು ಮಂತ್ರಿಗಳು ಈಗಲೂ ಕೇರಳದ ಸಂಪುಟದಲ್ಲಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಇದರ ಬಗ್ಗೆ ಯಾವ ಸಂಕೋಚವೂ ಇಲ್ಲ. ಅಧಿಕಾರದಲ್ಲಿ ಉಳಿಯುವ ಸಲುವಾಗಿ ಕಾಂಗ್ರೆಸ್ ಪಕ್ಷ ಕೇರಳದಲ್ಲಿ ಎಷ್ಟು ಹೀನ ಮಟ್ಟಕ್ಕೆ ಇಳಿಯಬಹುದೆನ್ನುವುದಕ್ಕೆ ಈ ಉದಾಹರಣೆ ಸಾಕು.

ಈ ಎಲ್ಲ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗ ಮತ್ತು ರಾಷ್ಟ್ರಮಟ್ಟದ ಟ್ರೇಡ್ ಯೂನಿಯನ್ ಸಂಘಟನೆಗಳು ವರ್ಣಬೇಧ ನೀತಿಯ ವಿರುದ್ಧ ವಿಶ್ವಶಾಂತಿಗಾಗಿ, ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯ ಪ್ರಶ್ನೆಯಂತಹ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಹತ್ವದ ಪ್ರಶ್ನೆಗಳಲ್ಲಿ ಒಂದಾಗಿ ಚಳುವಳಿ ನಡೆಸಲೂ ಕಾರ್ಯಕ್ರಮಗಳನ್ನು ರೂಪಿಸಲು ಮುಂದೆ ಬರುತ್ತಿರುವುದು ಸ್ವಾಗತಾರ್ಹ. ರಾಷ್ಟ್ರದ ಐಕ್ಯತೆ, ಸಮಗ್ರತೆ ಮತ್ತು ವಿಶ್ವಶಾಂತಿಯ ಪ್ರಶ್ನೆಗಳಲ್ಲಿ ಕಾರ್ಮಿಕ ಸಂಘಟನೆ ಇನ್ನೂ ಹೆಚ್ಚಾಗಿ ಐಕ್ಯ ಚಳುವಳಿ ನಡೆಸುವಲ್ಲಿ ಸಾಕಷ್ಟು ಮುತುವರ್ಜಿ ವಹಿಸಬೇಕೆಂದು ಪೊಲಿಟ್ ಬ್ಯೂರೋ ರಾಷ್ಟ್ರದ ಕಾರ್ಮಿಕ ವರ್ಗಕ್ಕೆ ಕರೆನೀಡಿದೆ.

ಪಂಜಾಬ್ : ಗಡಿ ಆಯೋಗಗಳ ಗೊಂದಲ

ಪ್ರಧಾನಿ ರಾಜೀವ್ ಗಾಂಧಿ ಮತ್ತು ಸಂತ ಹರಚಂದ್ ಲೋಂಗೋವಾಲರ ನಡುವೆ ಪಂಜಾಬ್ ಒಪ್ಪಂದ ಏರ್ಪಟ್ಟು ಹೆಚ್ಚು ಕಡಿಮೆ ಹನ್ನೊಂದು ತಿಂಗಳು ಕಳೆದ ಮೇಲೂ ಚಂಡೀಗಢವನ್ನು ಪಂಜಾಬಿಗೆ ವರ್ಗಾಯಿಸುವ ಮತ್ತು ಅದರ ಬದಲಾಗಿ ಪಂಜಾಬಿನಲ್ಲಿರುವ ಹಿಂದಿ ಮಾತನಾಡುವ ಪ್ರದೇಶಗಳನ್ನು ಹರಿಯಾಣಕ್ಕೆ ವರ್ಗಾಯಿಸುವ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಪಂಜಾಬಿನ ಹಿಂದಿ ಮಾತನಾಡುವ ಪ್ರದೇಶಗಳನ್ನು ಗುರುತಿಸುವ ಕೆಲಸಕ್ಕಾಗಿ ನೇಮಿಸಲ್ಪಟ್ಟ ಮಾಥ್ಯೂ ಆಯೋಗ ತನ್ನ ಕಾರ್ಯವನ್ನು ಪೂರ್ಣಗೊಳಿಸದೆ ಇನ್ನೊಂದು ಆಯೋಗವನ್ನು ನೇಮಿಸುವಂತೆ ಶಿಫಾರಸು ಮಾಡಿತ್ತು.

ಪಂಜಾಬಿನ ಹಿಂದಿ ಮಾತನಾಡುವ ಪ್ರದೇಶಗಳು ಹರಿಯಾಣಕ್ಕೆ ಭೌಗೋಳಿಕವಾಗಿ ತಾಗಿಕೊಂಡಿರಬೇಕು ಮತ್ತು ಗ್ರಾಮವನ್ನು ಒಂದು ಘಟಕವಾಗಿ ಪರಿಗಣಿಸಬೇಕು ಎಂಬ ಅಂಗೀಕೃತ ನಿಲುವಿಗೆ ಅನುಗುಣವಾಗಿ ಈ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಅಭೋಹಾರ್ ಮತ್ತು ಫಾಜಿಲ್ಕಗಳು ಹರಿಯಾಣಕ್ಕೆ ಭೌಗೋಳಿಕವಾಗಿ ನಿಕಟವಾಗಿಲ್ಲದ ಕಾರಣ ಅವುಗಳನ್ನು ಬಿಟ್ಟು ಬೇರೆ ಪ್ರದೇಶವನ್ನು ಗುರುತಿಸಬೇಕಾಗಿದೆ. ಈ ಕೆಲಸಕ್ಕಾಗಿ ನಿಯುಕ್ತವಾದ ನ್ಯಾಯಮೂರ್ತಿ ವೆಂಕಟರಾಮನ್ ಅವರ ನೇತೃತ್ವದ ಆಯೋಗ 45,000 ಎಕ್ರೆ ವಿಸ್ತೀರ್ಣದಷ್ಟು ಇಂತಹ ಪ್ರದೇಶವನ್ನು ಈಗಾಗಲೇ ಗುರುತಿಸಿದೆ. ಆದರೆ ಇದು ಚಂಡೀಗಢಕ್ಕೆ ಸಮಾನವಾದ ಪರಿಹಾರವಾಗಲಾರದೆಂದೂ 70,000 ಎಕ್ರೆಯಷ್ಟು ಪ್ರದೇಶವನ್ನು ಹರಿಯಾಣಕ್ಕೆ ವರ್ಗಾಯಿಸಬಹುದೆಂದೂ ವೆಂಕಟರಾಮನ್ ಆಯೋಗ ಶಿಫಾರಸ್ಸು ಮಾಡಿದೆ. ಇದಕ್ಕಾಗಿ ಇನ್ನೊಂದು ಸಮಿತಿಯನ್ನು ನೇಮಿಸಬೇಕೆಂಬ ಈ ಆಯೋಗದ ಶಿಫಾರಸಿನಂತೆ ನ್ಯಾಯಮೂರ್ತಿ ದೇಸಾಯಿ ಅವರ ನೇತೃತ್ವದ ಆಯೋಗ ನೇಮಿಸಲ್ಪಟ್ಟಿದೆ. ಆದರೆ ಕೇಂದ್ರ ಸರಕಾರ ವೆಂಕಟರಾಮನ್ ಆಯೋಗದ ಶಿಫಾರಸನ್ನು ತಪ್ಪಾಗಿ ಅರ್ಥೈಸಿಕೊಂಡು ವೆಂಕಟರಾಮನ್ ಆಯೋಗ ಕೊಡಮಾಡಿರುವ 45,000 ಎಕರೆಗಳಲ್ಲದೆ ಇನ್ನೂ 70,000 ಎಕರೆಗಳನ್ನು ಹರಿಯಾಣಕ್ಕೆ ನೀಡಬೇಕೆಂಬ ಭಾವನೆ ಉಂಟಾಗುವಂತೆ ಮಾಡಿದೆ. ಈ ಕಾರಣದಿಂದ ಪಂಜಾಬ್ ಸರಕಾರ ದೇಸಾಯಿ ಆಯೋಗವನ್ನು ಬಹಿಷ್ಕರಿಸಲು ನಿರ್ಧರಿಸಿದೆ. ಈ ಎಲ್ಲ ಗೊಂದಲಗಳನ್ನು ನಿವಾರಿಸಿ ವೆಂಕಟರಾಮನ್ ಆಯೋಗ ಗುರುತಿಸಿರುವ 45000 ಎಕ್ರೆ ಪ್ರದೇಶವನ್ನು ಹರಿಯಾಣಕ್ಕೆ ವರ್ಗಾಯಿಸಿ, ಇನ್ನು 25.000 ಎಕ್ರೆ ಹಿಂದಿ ಮಾತನಾಡುವ ಪ್ರದೇಶವನ್ನು ಆದಷ್ಟು ಬೇಗನೆ ಗುರುತಿಸಿ ಅದನ್ನು ಚಂಡೀಗಢಕ್ಕೆ ಬದಲಾಗಿ ಹರಿಯಾಣಕ್ಕೆ ನೀಡಬೇಕು. ಜುಲೈ 18 ರ ಒಳಗಾಗಿ ಚಂಡೀಗಢವನ್ನು ಪಂಜಾಬಿಗೆ ವರ್ಗಾಯಿಸಬೇಕಲ್ಲದೆ ಸಟ್ಲೆಜ್–ಯಮುನಾ ಜೋಡಣೆಯ ಕಾಲುವೆ ನಿರ್ಮಾಣವನ್ನು ಕೂಡಲೇ ಕೈಗೆತ್ತಿಕೊಳ್ಳಬೇಕು. ಕೇಂದ್ರ ಸರಕಾರ ಈ ದಿಸೆಯಲ್ಲಿ ಅನುಸರಿಸುತ್ತಿರುವ ವಿಳಂಬ ನೀತಿಯಿಂದಾಗಿ ಪಂಜಾಬ್–ಹರಿಯಾಣ ರಾಜ್ಯಗಳಲ್ಲಿ ಅತೃಪ್ತಿ ಬೆಳೆಯುತ್ತಿದ್ದು ಎರಡೂ ರಾಜ್ಯಗಳಲ್ಲಿ ಸಮಯ ಸಾಧಕ ಶಕ್ತಿಗಳಿಗೆ ತುಂಬಾ ಅನುಕೂಲವಾಗುತ್ತಿದೆ.

ಈ ಹಂತದಲ್ಲಿ ಉಳಿದಿರುವ ಸಮಸ್ಯೆಗಳನ್ನು ಬೇಗನೆ ಪರಿಹರಿಸಿದಲ್ಲಿ ಮಾತ್ರ ಬರ್ನಾಲಾ ಅವರ ಕೈಗಳನ್ನು ಬಲಪಡಿಸಬಹುದು. ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಕೇಂದ್ರ ಸರಕಾರ ಈ ದಿಸೆಯಲ್ಲಿ ಶೀಘ್ರ ಕ್ರಮ ಕೈಗೊಳ್ಳಬೇಕಾದುದು ತೀರಾ ಅಗತ್ಯ.

ಯುಗೋಸ್ಲಾವಿಯ ಕಮ್ಯುನಿಸ್ಟ್ ಲೀಗ್‌ನ *13* ನೇ ಮಹಾಧಿವೇಶನಕ್ಕೆ ಸಿ. ಪಿ. ಐ. (ಎಂ) ಸಂದೇಶ

ಕಳೆದ ಜೂನ್ 25 ರಿಂದ 28 ರ ವರೆಗೆ ಬೆಲ್‌ಗ್ರೇಡ್‌ನಲ್ಲಿ "ಯುಗೋಸ್ಲಾವಿಯಾ ಕಮ್ಯುನಿಸ್ಟರ ಲೀಗ್"ನ ಹದಿಮೂರನೇ ಮಹಾಧಿವೇಶನ ಜರುಗಿತು. ಈ ಅಧಿವೇಶನದಲ್ಲಿ ಸಿ. ಪಿ. ಐ. (ಎಂ) ಪರವಾಗಿ ಪಾಲಿಟ್ ಬ್ಯೂರೋ ಸದಸ್ಯ ಕಾ. ಸಮರ್ ಮುಖರ್ಜಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಿ. ಪಿ. ಐ (ಎಂ) ನ ಕೇಂದ್ರ ಸಮಿತಿ ಯುಗೊಸ್ಲಾವಿಯಾ ಕಮ್ಯುನಿಸ್ಟರ ಲೀಗ್‌ಗೆ ಕಳುಹಿಸಿದ ಸಂದೇಶದಲ್ಲಿ ಮಾರ್ಷಲ್ ಟಿಟೋರವರ ನೇತೃತ್ವದಲ್ಲಿ ಫ್ಯಾಸಿಸ್ಟ್ ಅತಿಕ್ರಮಣದ ವಿರುದ್ಧ ಲೀಗ್‌ನ ಧೀರ ಹೋರಾಟದ ವೀರ ಪರಂಪರೆಯನ್ನು ಜ್ಞಾಪಿಸಿಕೊಳ್ಳುತ್ತಾ ಯುಗೋಸ್ಲಾವಿಯಾ ವಿಮೋಚನೆಯ ನಂತರ ಸಮಾಜವಾದೀ ದಾರಿ ಅಂಗೀಕರಿಸಿ, ವಿವಿಧ ದೇಶೀಯ ಗುಂಪುಗಳಿಗೆ ಸಮಾನ ಹಾಗೂ ಪೂರ್ಣಹಕ್ಕು ನೀಡಿ ಸಾಕಷ್ಟು ಮುನ್ನಡೆ ಸಾಧಿಸಿದೆ ಎಂದು ಹೇಳಿದೆ. ಪ್ರತಿಕೂಲ ಆರ್ಥಿಕ ಅಂಶಗಳನ್ನು ಎದುರಿಸಿ, ಯುಗೋಸ್ಲಾವ್ ಒಕ್ಕೂಟದ ಐಕ್ಯತೆಯನ್ನು ಬೆಸೆದು ದೇಶವನ್ನು ಮುಂದೊಯ್ಯುವ ಪ್ರಶ್ನೆಗಳ ಕುರಿತು ಈ ಮಹಾಧಿವೇಶನ ಆಳವಾದ ಚರ್ಚೆ ನಡೆಸಿ, ಸಮಾಜವಾದೀ ನೀತಿ ಹಾಗೂ ಕಮ್ಯುನಿಸ್ಟ್ ಪ್ರಯತ್ನಗಳ ಆಧಾರದ ಮೇಲೆ ಯುಗೊಸ್ಲಾವಿಯಾದ ಜನಸಮೂಹಗಳ ಹಾಗೂ ಅವರ ಸಮಾಜದ ಸರ್ವತೋಮುಖ ಬೆಳವಣಿಗೆಯ ದಾರಿಯಲ್ಲಿ ಈ ಅಧಿವೇಶನ ಒಂದು ಹೊಸ ಘಟ್ಟ ಆರಂಭಿಸುವುದೆಂಬ ವಿಶ್ವಾಸವನ್ನು ಸಿ. ಪಿ. ಐ (ಎಂ) ನ ಕೇಂದ್ರ ಸಮಿತಿ ವ್ಯಕ್ತಪಡಿಸಿದೆ. ○

ಪ್ರೆಸ್ ಕಾರ್ಮಿಕರ ಮುಷ್ಕರ

ಸರ್ಕಾರ ಪ್ರಕಟಿಸಿದ ಕನಿಷ್ಠ ವೇತನದ ಏರಿಳಿತ ತುಟ್ಟಿಭತ್ಯೆಯನ್ನು ಜಾರಿಗೊಳಿಸುವಂತೆ ದ. ಕನ್ನಡ ಜಿಲ್ಲೆಯ ಮುದ್ರಣಾಲಯಗಳ ಕಾರ್ಮಿಕರು ಅನೇಕ ರೀತಿಯಲ್ಲಿ ಒತ್ತಾಯಿಸಿದ್ದರೂ ಸಹ ಮಾಲೀಕರು ಅದನ್ನು ಜಾರಿಗೊಳಿಸದಿರುವುದನ್ನು ಪ್ರತಿಭಟಿಸಿ ದ. ಕನ್ನಡ ಜಿಲ್ಲೆಯ ಪ್ರೆಸ್ ಕಾರ್ಮಿಕರು ಜುಲೈ 4ರಂದು ಮುಷ್ಕರ ನಡೆಸಿ, ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರ ಕಚೇರಿಗೆ ನಿಯೋಗ ಹೋಗಿ ಈ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು. ಕಮಿಷನರ್ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರೆಂದು ಪ್ರಕಟಣೆ ತಿಳಿಸಿದೆ.

ಹಿಂದಿ ಹಿಪ್ಪೆ ಮಾಡುವ ಶಿಕ್ಷಣ ಸಂಸ್ಥೆಗಳ ಹಲವು ಪರಸಂಗಗಳು

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಅಡಾದುಂದಿ ವ್ಯವಹಾರಗಳ ಬಗ್ಗೆ ನೀವು ಕೇಳಿರುತ್ತೀರಿ. ಹರಪನಹಳ್ಳಿ ವಿದ್ಯಾ (!) ಸಂಸ್ಥೆಗಳ ಈ ಮಾದರಿ ನೋಡಿ.

ಬಳ್ಳಾರಿಯೊಂದನ್ನು ಬಿಟ್ಟರೆ, ಹರಪನಹಳ್ಳಿ ಜಿಲ್ಲೆಯಲ್ಲೇ ಅನೇಕ ಶಾಲೆ ಕಾಲೇಜುಗಳಿಂದಾಗಿ "ಶೈಕ್ಷಣಿಕ ಕ್ಷೇತ್ರ"ವಾಗಿದೆ. ಇಲ್ಲಿ ಸುಮಾರು 14 ವಿಭಿನ್ನ ಶಾಲೆ–ಕಾಲೇಜುಗಳಿವೆ. ಇವುಗಳ ಒಡೆಯರಾದ ಮೂರ್ನಾಲ್ಕು ಮಠಾಧಿಪತಿಗಳ ದಂಧೆ, ಶಿಕ್ಷಣವನ್ನು ಲಾಭದಾಯಕ ಉದ್ದಿಮೆಯನ್ನಾಗಿ ಮಾಡಿಕೊಂಡಿರುವುದು. ಇವರು ನಡೆಸುವ "ವಿದ್ಯಾಮಂದಿರ"ಗಳಿಗೆ ಬರುವ ಭಕ್ತರು ಡೊನೇಶನ್, ಕ್ಯಾಪಿಟೇಶನ್ ಶುಲ್ಕ ಕೊಡಲು ಶಕ್ತರಾದ ದೇಶದ ಮೂಲೆ ಮೂಲೆಯ ಹುಡುಗರು ಇವರನ್ನು ಬೇಟಿಮಾಡಲಿಕ್ಕೇ ಒಂದುಭಕ್ತಪಡೆ ಇದೆ. ಈ ಸಂಸ್ಥೆಯ ಶಾಲೆ ಕಾಲೇಜುಗಳಲ್ಲಿ ದುಡಿಯುತ್ತಿರುವ ಶಿಕ್ಷಕರ ಸಿಬ್ಬಂದಿಯ ಸ್ಥಿತಿಗತಿಗಳ ಬಗ್ಗೆ ಬರೆದರೆ ದೊಡ್ಡ ಇತಿಹಾಸವೇ ಆದೀತು. ಸರಕಾರಿ ನಿಯಮಾವಳಿಗಳನ್ನು ಪಾಲಿಸದೆ ಯಾವ ಯಾವ ರೀತಿಯಿಂದ ಶೋಷಿಸಲು ಸಾಧ್ಯವೋ ಆ ಎಲ್ಲ ಮೂಲಗಳನ್ನು ಸ್ವಾಮಿ ಹೆಗ್ಗಣಗಳು ಹೊಕ್ಕು ಕೊಬ್ಬಿವೆ. ಉದಾಹರಣೆಗೆ– ಟಿ.ಎಂ.ಎ.ಇ ಸಂಸ್ಥೆ ಇಲ್ಲಿ ಮತ್ತು ಬೇರೆಡೆ ನಡೆಸುತ್ತಿರುವ ಶಾಲೆ ಕಾಲೇಜುಗಳ ವೈಖರಿ ಬಿ ಫಾರ್ಮಸಿ–ಡಿ ಫಾರ್ಮಸಿ, ಬಿ ಎಡ್, ಟಿ ಸಿ, ಎಚ್. ಐ.ಟಿ.ಐ, ಹೈಸ್ಕೂಲುಗಳು, ಮುಂತಾದವು ಮೊದಲಿನ ಮೂರು ಕಾಲೇಜುಗಳಿಂದ ಇತ್ತೀಚೆಗೆ ಕಾರು ಅಘಘಾತದಲ್ಲಿ ಗಾಯಗೊಂಡಿರುವ ಚಂದ್ರಮೌಳಿ ಸ್ವಾಮಿಗೆ ಎಲ್ಲಿಲ್ಲದ ಆದಾಯ.

ಬಿ ಮತ್ತು ಡಿ ಫಾರ್ಮಸಿ ಕಾಲೇಜುಗಳ ಅಧ್ಯಾಪಕರು ಈ ಹಿಂದೆ ಕೊನೇ ಅಸ್ತ್ರವಾಗಿ ಬೀದಿಗಿಳಿದು ಹೋರಾಡಿದ್ದರಿಂದ ಮತ್ತು ವಿದ್ಯಾರ್ಥಿಗಳು ಅವರಿಗೆ ಸಂಪೂರ್ಣ ಬೆಂಬಲ ಕೊಟ್ಟದ್ದರಿಂದ ಈಗ ಸೇವಾ ನಿಯಮಾವಳಿಗಳ ಪ್ರಕಾರ ಸಂಬಳ, ಬಡತಿ ಮುಂತಾದ ಕನಿಷ್ಟ ಸೌಲಭ್ಯಗಳನ್ನಾದರೂ ಪಡೆಯುವಂತಾಗಿದೆ. 1978–79 ರಲ್ಲಿ ಟಿ. ಸಿ. ಎಚ್. ಮತ್ತು ಬಿ. ಎಡ್ ಕಾಲೇಜು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಮೂರುದಿನ ಸತತ ಹೋರಾಟ ನಡೆಸಿದಾಗ ಕೆಲವು ಸಣ್ಣಪುಟ್ಟ ಸೌಲಭ್ಯಗಳನ್ನು ಪಡೆಯುವಂತಾಗಿತ್ತು. ಶಿಕ್ಷಕರನ್ನು ನೇಮಿಸಿಕೊಳ್ಳುವಾಗಲೆ ಅವರಿಂದಲೂ ಹಣವನ್ನು ಕಿತ್ತು ಎಷ್ಟೋ ವರ್ಷ ಪುಕ್ಕಟೆ ದುಡಿಯಬೇಕೆಂಬ ಕರಾರನ್ನು ಹಾಕಿರುತ್ತದೆ. ಮತ್ತು ಆ ಕರಾರು ಮುಗಿದ ಮೇಲೂ ಸಂಬಳ ಕೊಡದೆ ಅಥವಾ ಅರೆ ಬರೆ ಕೊಟ್ಟಾಗ ಈ ಸಂಸ್ಥೆ ನಡೆಸುವ ಕುಮಾರನಹಳ್ಳಿ ತಾಂಡಾದ ಹೈಸ್ಕೂಲು ಶಿಕ್ಷಕರು (ಗೋಗ್ಲಾಬಾಯಿ ಎಂಬ ಲಮಾಣಿ ಶ್ರೀಮಂತ ಮಹಿಳೆ ಈ ಸ್ಕೂಲಿಗೆ ದೇಣಿಗೆಕೊಟ್ಟದ್ದಾಳೆ), ವಿದ್ಯಾರ್ಥಿಗಳು ತಮ್ಮ ಸೌಲಭ್ಯಗಳಿಗೆ ನಡೆಸುತ್ತಿದ್ದ ಹೋರಾಟದ ಜತೆ ಸೇರಿ ನೇತೃತ್ವ ವಹಿಸಿದ್ದ ಹಡಗಲಿ, ಹರಪನಹಳ್ಳಿಯ ಎಸ್ ಎಫ್. ಐ. ಮುಖಂಡರಿಗೆ ಸಂಸ್ಥೆಯವರು ಮಣಿದು ಬಾಂಡ್‌ಮೇಲೆ ಸಹಿ ಮಾಡಿಕೊಟ್ಟು ಶಿಕ್ಷಕರಿಗೆ ಸಂಬಳ ಬರುವ ಹಾಗಾಗಿತ್ತು.

ಈ ಭ್ರಷ್ಟ ಸಂಸ್ಥೆಯೇ ನಡೆಸುತ್ತಿರುವ ಹರಪನಹಳ್ಳಿ ಬಿ ಎಡ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರು 7 ಜನ. ಪ್ರಾಚಾರ್ಯ ಬಿ. ಎಂ. ವೀರಭದ್ರಯ್ಯ ಮತ್ತು ಇವರ ಚೇಲಾ ಶಿಕ್ಷಕಿ ಟಿ. ಎಂ. ಸುಮಂಗಲಮ್ಮ ಸ್ವಾಮಿಗಳ ಸಮೀಪ ಸಂಬಂಧಿಗಳು. ಈ ಕಾಲೇಜು ಪ್ರಾರಂಭವಾಗಿ 14 ವರ್ಷವಾದರೂ ಬಹುತೇಕ ಶಿಕ್ಷಕರೆಲ್ಲ ಕಳೆದ 5–6 ವರ್ಷಗಳಿಂದಲೂ ದುಡಿಯುತ್ತ ಬಂದಿದ್ದಾರೆ. ಕಾಲೇಜಿಗೆ ಸರಕಾರಿ ಗ್ರ್ಯಾಂಟ್ ಇಲ್ಲ ಎಂಬ ನೆಪವನ್ನೊಡ್ಡಿ (ಬೇಕೆಂದೇ ಗ್ರ್ಯಾಂಟ್ ಮಾಡಿಸುತ್ತಿಲ್ಲ) ಶಿಕ್ಷಕರಿಗೆ ಅರೆಬರೆ ಸಂಬಳ ಕೊಡುತ್ತ, ಬಡತಿ ಇಲ್ಲದೆ, ಬೇರಾವ ಸೌಲಭ್ಯಗಳಿಲ್ಲದೆ ಇವರ ಸ್ಥಿತಿ ಅರಕ್ಕೆ ಏರದೆ 3 ಕ್ಕೆ ಇಳಿಯುದಂತಾಗಿದೆ.

ಬಿ. ಎಡ್. ಪದವಿಯನ್ನು ನೀಡುವುದಕ್ಕಾಗಿ ವಿಧ್ಯಾರ್ಥಿಗಳು ಪ್ರಥಮದಲ್ಲಿ ಹಲವಾರು ಕಡ್ಡಾಯದ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ, ಅವು (1) ಪ್ರ್ಯಾಕ್ಟೀಸ್ ಟೀಚಿಂಗ್ (2) ಪ್ರೊಜೆಕ್ಟ್ ವರ್ಕ್ (3) ಪ್ರವಾಸ ಮತ್ತು ಸಾಂಸ್ಕೃತಿಕ ಚಟುವಟಿಕೆ (4) ವಿಮರ್ಶಾ ಪಾಠ (5) ನಾಗರೀಕ ತರಬೇತಿ ಶಿಬಿರ (6) ಮನಶಾಸ್ತ್ರ ಪ್ರಯೋಗಗಳು (7) ಪಿಠೋಪಕರಣಗಳನ್ನು ವ್ಯವಸ್ಥಿತವಾಗಿ ಸಲ್ಲಿಸುವುದು 8) ಉಪ ಪರೀಕ್ಷೆಗಳು ಇತ್ಯಾದಿ. ಇವೆಲ್ಲಕ್ಕೂ 200 ಅಂಕಗಳು ಆಯಾ ಅಧ್ಯಾಪಕರ ಕೈಲಿರುತ್ತವೆ.

ಈ ಕಾಲೇಜಿನಿಂದ ಈ ಸಲ 105 ವಿದ್ಯಾರ್ಥಿಗಳು ಪದವಿಯನ್ನು ಪಡೆದು ಹೊರ ಬರಲಿದ್ದಾರೆ. ಅವರಲ್ಲಿ ಡಿ. ಆರ್. ಸರಗಣ್ಣಾಚಾರಿ ಎಂಬ ವಿಧ್ಯಾರ್ಥಿ ಪ್ರೊಜೆಕ್ಟ್ ವರ್ಕ್‌ನ್ನು ಹೋದ ವರ್ಷದ (1984-85) ವಿಧ್ಯಾರ್ಥಿಯಾದ ಕೆ. ಸಿ. ಹೊಗಾರ ಎಂಬುವರ ಪ್ರೊಜೆಕ್ಟ್ ವರ್ಕ್‌ನ್ನು ಕದ್ದ (ಯಾರ ಸಹಾಯದಿಂದ ಹೇಗೆ ಕದ್ದ ?). ಮೊದಲ ಪುಟವನ್ನು ಕಿತ್ತು ತಾನೆ ಸರ್ಟಿಫಿಕೇಟು ಬರೆದು ಮಾರ್ಗದರ್ಶಕಿಯಾದ ಶ್ರೀಮತಿ ಟಿ. ಎಂ. ಸುಮಂಗಲಮ್ಮ ಮತ್ತು ಪ್ರಾಚಾರ್ಯ ಡಾ|| ಬಿ. ಎಂ. ವೀರಭದ್ರಯ್ಯನವರ ಸಹಿ ಪಡೆದುಕೊಂಡು; ಉಳಿದೆಲ್ಲ ಶಿಕ್ಷಕರನ್ನು ಮಾರ್ಚ್ 17, 18, ರಂದು ನಡೆದ ಸಂದರ್ಶನದಲ್ಲಿ ಮೋಸಗೊಳಿಸಲೆತ್ನಿಸಿದಾಗ ಸಿಕ್ಕಿಬಿದ್ದು ಆ ಹುಡುಗ ಆಗ ತನ್ನ ತಪ್ಪನ್ನು ಒಪ್ಪಿಕೊಂಡ, ಮೇಲಧಿಕಾರಿಗಳು ಕೊಡುವ ಶಿಕ್ಷೆಗೆ ತಾನು ಬದ್ಧನೆಂದು ಅದೇ ಪತ್ರಿಕೆಯಮೇಲೆ ಬರೆದುಕೊಟ್ಟ. ಅದಕ್ಕೆ ಸಾಕ್ಷಿಯಾಗಿ, ಪ್ರಾಚಾರ್ಯರನ್ನು ಹೊರತುಪಡಿಸಿ ಎಲ್ಲ ಆರು ಶಿಕ್ಷಕರು [ಸುಮಂಗಲಮ್ಮ ಸಹ] ಸಹಿ ಮಾಡಿ, ನಿಯಮದ ಪ್ರಕಾರ ಅದನ್ನು ವಿಶ್ವವಿಧ್ಯಾಲಯಕ್ಕೆ ಕಳಿಸಲು ಪ್ರಾಚಾರ್ಯರಿಗೆ ಒಪ್ಪಿಸಲಾಯಿತು ಈ ವಿಧ್ಯಾರ್ಥಿಯ ರಿಜಿಸ್ಟರ್ ನಂಬರು 730. ವಿಶ್ವವಿದ್ಯಾಲಯದ ನಿಯಮದ ಪ್ರಕಾರ ಪ್ರೊಜೆಕ್ಟ್ ವರ್ಕ್ ಮುಂತಾದೆಲ್ಲ ಉತ್ತರ ಪತ್ರಿಕೆಗಳು ಆಯಾ ಕಾಲೇಜುಗಳಲ್ಲೇ ಇರಬೇಕಾಗುತ್ತದೆ, ಬರೇ ಅಂಕಗಳನ್ನು ಮಾತ್ರ ವಿಶ್ವವಿದ್ಯಾಲಯಕ್ಕೆ ಕಳಿಸಬೇಕಾಗುತ್ತದೆ.

ಡಿ ಮತ್ತು ಬಿ ಫಾರ್ಮಸಿ ಕಾಲೇಜಿನ ಚರಿತ್ರೆಯಂತೂ ಅತ್ಯದ್ಭುತ. ಪ್ರತಿ ವರ್ಷ ಹಲವು ಭ್ರಷ್ಟ ಅಧ್ಯಾಪಕರು ಇಪ್ಪತ್ತು ಸಾವಿರ ರೂ.ಗಟ್ಟಲೆ ಅಂತರಿಕ ಅಂಕಗಳಿಂದಾಗಿ ಗಳಿಸುತ್ತಿದ್ದರೆ ಸಂಸ್ಥೆಯಂತೂ ಲಕ್ಷಾಂತರ ರೂ.ಗಳನ್ನು ಡೊನೇಶನ್ ರೂಪದಲ್ಲಿ ಕೀಳುತ್ತದೆ.

ಈ ಕಾಲೇಜಿನಿಂದ ಸ್ವಾಮಿಗೆ ಬರುವಷ್ಟು ಆದಾಯವು ಬೇರಾವ ಕಾಲೇಜಿನಿಂದಲೂ ಬರದು. ಆದರೆ ಸಮರ್ಥ ಪಿಠಾರ್ಹ ಪ್ರಾಚಾರ್ಯರಿಲ್ಲದಿರುವುದು, ಬೋಧಕ ವರ್ಗದ ಕೊರತೆ (ಆಂಧ್ರ, ಪಶ್ಚಿಮ ಬಂಗಾಲ, ತಮಿಳುನಾಡು, ಬಿಹಾರ, ಕೇರಳ, ಮುಂತಾದೆಡೆಗಳಿಂದ ಬರುವ ಅಧ್ಯಾಪಕರಿಗೆ ಕನಿಷ್ಟ ಸೌಲಭ್ಯಗಳು ದೊರೆಯದೆ, ಸೇವಾ ಭದ್ರತೆ, ಸಂಬಳ ಸರಿ ಇಲ್ಲದೆ ಬಿಟ್ಟು ಹೋಗುವುದು ಮಾಮೂಲು) ಹಾಸ್ಟೆಲ್ ಸೌಲಭ್ಯವಿಲ್ಲದಿರುವುದು, ಲ್ಯಾಬರೇಟರಿ, ಗ್ರಂಥಾಲಯಗಳ ಕೊರತೆ, ಮುಂತಾದ ಸಮಸ್ಯೆಗಳ ವಿರುದ್ಧ ಅನೇಕ ಸಲ ವಿಧ್ಯಾರ್ಥಿಗಳು ಹರಪನ ಹಳ್ಳಿ ಬೀದಿಗಳಿಗೆ ಹೋರಾಟದ ರುಚಿ ಹತ್ತಿಸಿದ್ದಾರೆ. ಸ್ವಾಮಿಯ ಒಳನಡಾವಳಿಗಳನ್ನು ಜನರೆದುರು ಬಿಚ್ಚಿಟ್ಟಿದ್ದಾರೆ. ಆದರೂ ವಿದ್ಯಾರ್ಥಿಗಳಲ್ಲೇ ಭಾಷೆ, ಗಡಿ, ಜಾತಿಗಳಿಂದ ಒಡಕು ತಂದು ಅವರ ಹೋರಾಟವನ್ನು ಹತ್ತಿಕ್ಕುವ, ಅನಿವಾರ್ಯವಾದಾಗ ಅಲ್ಪ ಸಲ್ಪ ಸೌಲಭ್ಯಗಳನ್ನು ಒದಗಿಸುವ ಸ್ಥಿತಿ ಇದೆ. ಬೇರೆ ರಾಜ್ಯಗಳಿಂದ ಬರುವ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಇತ್ಯಾದಿ ಸೌಲಭ್ಯಗಳಿಲ್ಲದೆ ಪರದಾಡುವ ಸ್ಥಿತಿ ಗಂಭೀರ.

"ಹರಪನಹಳ್ಳಿ" ಎಂಬ ಹೆಸರು ಕರ್ನಾಟಕದ ಬಹಳ ಜನಕೆ ತಿಳಿಯದಿರಬಹುದು. ಆದರೆ ಹೊರ ರಾಜ್ಯ, ಹೊರ ರಾಷ್ಟ್ರಗಳಲ್ಲಿ (ಪಶ್ಚಿಮ ಬಂಗಾಲ, ಬಿಹಾರ, ಮಹಾರಾಷ್ಟ್ರ, ಕೇರಳ, ಆಂಧ್ರ, ತಮಿಳುನಾಡು, ಇರಾನ್ ಮುಂತಾದುವು) ಈ ಹೆಸರು ಪರಿಚಿತವಾಗಿದೆ. ಜಿಲ್ಲೆಯ ಪ್ರಮುಖ ವಿದ್ಯಾ ಕೇಂದ್ರವಾಗಿ ಎದುರಿಸುತ್ತಿರುವ ಸಮಸ್ಯೆಗಳ ಅಸಂಖ್ಯ ಮುಖಗಳಲ್ಲಿ ಇವು ಎಲ್ಲೋ ಕೆಲವು ಮಾತ್ರ.

ಹರಪನಹಳ್ಳಿಯಲ್ಲಿರುವ ಏಕೈಕ ಪ್ರಗತಿ ಪರ ವಿದ್ಯಾರ್ಥಿ ಸಂಘಟನೆಯಾದ ಎಸ್.ಎಫ್.ಐ ಈ ಸಮಸ್ಯೆಗಳ ಸಲುವಾಗಿ ಹೋರಾಡಬೇಕಾಗಿದೆ.

— ವರದಿಗಾರ

ಎಲ್ಲಿ ಹೆಚ್ಚು ಭಯ ?

ಯುರೋಪಿನಲ್ಲಿ ಪ್ರವಾಸ ಮಾಡುವ ಅಮೆರಿಕನ್ನರ ಸಂಖ್ಯೆ ಈ ಬೇಸಗೆಯಲ್ಲಿ ಕಮ್ಮಿಯಾಗಬಹುದು ಎಂದು ಅಮೆರಿಕನ್ ಟೆಲಿವಿಶನ್ ಕಂಪೆನಿ ಸಿ. ಬಿ. ಎಸ್. ಭವಿಷ್ಯ ನುಡಿದಿದೆ. ಕಾರಣ ಭಯೋತ್ಪಾದಕರ ಭಯ. ಆದರೆ ಅವರ ಈ ಭಯ ಎಷ್ಟು ವಾಸ್ತವ ! ಕಳೆದ ವರ್ಷ 65 ಲಕ್ಷ ಅಮೆರಿಕನ್ನರು ಯುರೋಪಿಗೆ ಭೇಟಿಯಿತ್ತರು ಅವರಲ್ಲಿ ಭಯೋತ್ಪಾದಕರಿಂದ ಸತ್ತವರ ಸಂಖ್ಯೆ ಕೇವಲ 10 – ಅಂದರೆ ಪ್ರತಿ ಆರೂವರೆ ಲಕ್ಷ ಮಂದಿಯಲ್ಲಿ ಒಬ್ಬ. ಆದರೆ ಒಬ್ಬ ಅಮೆರಿಕನ್ ನಾಗರಿಕ ತನ್ನ ದೇಶದೊಳಗೇ ಕೊಲೆಯಾಗುವ ಸಂಭವ ಇದರ 52 ಪಟ್ಟು ಎಂದಿದೆ ಅದೇ ಟೆಲಿವಿಶನ್ ಕಂಪೆನಿ ! ಯಾಕೆಂದರೆ ಅಮೆರಿಕಾದಲ್ಲಿ ಕಳೆದ ವರ್ಷ ಪ್ರತಿ ಒಂದು ಲಕ್ಷ ಮಂದಿಗೆ ಎಂಟರಂತೆ ಕೊಲೆಗಳು ನಡೆದಿವೆ.

ಸ್ಟೈಫಂಡರಿ ನಿಲ್ಲಿಕೆ ವಿರುದ್ಧ ಹೋರಾಟಕ್ಕೆ ಕರೆ

ಡಿ. ವೈ. ಎಫ್. ಐ. ಕರ್ನಾಟಕ ರಾಜ್ಯ ಸಮಿತಿಯು ಮೈಸೂರಿನಲ್ಲಿ ಜಿ. ಜಯರಾಂ ಅವರ ಅಧ್ಯಕ್ಷತೆಯಲ್ಲಿ ಜುಲೈ 2 ಮತ್ತು 3 ರಂದು ನಡೆಯಿತು. ಸಮಿತಿಯು ವಿಶ್ವಶಾಂತಿ, ರಾಷ್ಟ್ರೀಯ ಸಮಗ್ರತೆ, ದಕ್ಷಿಣ ಆಫ್ರಿಕಾದ ಜನತೆಯ ಹೋರಾಟಗಳು ಹಾಗೂ ನಿರುದ್ಯೋಗ, ಅನಕ್ಷರತೆ ಮತ್ತು ವರದಕ್ಷಿಣೆ ಮುಂತಾದ ವಿಶಯಗಳನ್ನು ಚರ್ಚಿಸಿ ಕೆಳಗಿನ ತೀರ್ಮಾನಗಳನ್ನು ಕೈಗೊಂಡಿದೆ. ಕಾ. ಎಂ. ಎ ಬೇಬಿ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ಆಗಸ್ಟ್ 15ರಂದು ರಾಜ್ಯದ ಎಲ್ಲಾ ಘಟಕಗಳು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬೇಕು. ಪ್ರಚಾರ, ಪ್ರಕ್ಷೋಭೆ, ಚರ್ಚಾಗೋಷ್ಠಿ, ವಿಚಾರ ಸಂಕಿರಣ ನಡೆಸುವುದರ ಮೂಲಕ ಅಮೇರಿಕನ್ ಸಾಮ್ರಾಜ್ಯಶಾಹಿಗಳ ರಾಷ್ಟ್ರದ ಸ್ವಾತಂತ್ರ್ಯಕ್ಕೆ ದಕ್ಕೆ ತರುವ ಪಿತೂರಿಗಳನ್ನು ಬಯಲು ಮಾಡಬೇಕು.

ಆಗಸ್ಟ್ ಕೊನೆಯ ವಾರದಲ್ಲಿ ರಾಜ್ಯ ಸರ್ಕಾರದ ವತಿಯಲ್ಲಿರುವ ಸಾವಿರಾರು ಹುದ್ದೆಗಳನ್ನು ಭರ್ತಿಮಾಡಲು, 1979 ರ ನಂತರ ನಿಲ್ಲಿಸಲಾಗಿರುವ ಪದವೀಧರರಿಗೆ ನೀಡಲಾಗುತ್ತಿದ್ದ ಸ್ಟೈಫಂಡನ್ನು ಮುಂದುವರಿಸಲು, ಎಸ್. ಎಸ್. ಎಲ್. ಸಿ. ಅದವರಿಂದ ಎಲ್ಲಾ ಡಿಪ್ಲೋಮ, ವೃತ್ತಿ ತರಬೇತಿದಾರರೂ, ಹಾಗೂ ಉದ್ಯೋಗಕ್ಕೆ ಅರ್ಹರಾದವೆಲ್ಲರಿಗೂ ನಿರುದ್ಯೋಗ ಭತ್ಯೆ ನೀಡಬೇಕೆಂದು ಒತ್ತಾಯಿಸಿ ಧರಣಿ, ಸತ್ಯಾಗ್ರಹ ಮೆರವಣಿಗೆ ನಡೆಸಬೇಕೆಂಬ ನಿರ್ಣಯಗಳನ್ನು ಕೈಗೊಂಡಿತು.

ಸೆಪ್ಟೆಂಬರ್ 15 ರಂದು ಎಸ್. ಎಫ್. ಐ. ಜೊತೆಯಲ್ಲಿ ಹೊಸ ಶಿಕ್ಷಣ ನೀತಿ, ಉದ್ಯೋಗ ಭಕ್ಷಕ ಕಂಪ್ಯೂಟರ್ ಮತ್ತು ಹೊಸ ಆರ್ಥಿಕ ನೀತಿಗಳನ್ನು ವಿರೋಧಿಸಿ ಜಿಲ್ಲಾ ಮಟ್ಟದಲ್ಲಿ ಆಂದೋಲನ ನಡೆಸಬೇಕೆಂದು ತೀರ್ಮಾನಿಸಿತು.

ಚಿಕ್ಕಮಗಳೂರು-

ಜಿಲ್ಲೆಯಾದ್ಯಂತ ತೋಟ ಕಾರ್ಮಿಕರ ಚಳವಳಿ

ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ 8ನೇ ಸಮ್ಮೇಳನದ ಹಾಗೂ ಚಿಕ್ಕ ಮಗಳೂರಿನಲ್ಲಿ ನಡೆದ ತೋಟ ಕಾರ್ಮಿಕರ ರಾಜ್ಯ ಸಮಾವೇಶದ ಕರೆಯ ಮೇರೆಗೆ ತೋಟ ಕಾರ್ಮಿಕರ ಬೇಡಿಕೆಗಳನ್ನು ಒತ್ತಾಯಿಸಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಚಳುವಳಿ ನಡೆಯಿತು.

ಜೂನ್ 16 ರಂದು ಚಿಕ್ಕಮಗಳೂರಿನಲ್ಲಿನ ಸಂಘದ ಕಚೇರಿಯಿಂದ ಹೊರಟ ಮೆರವಣಿಗೆ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಶನ್ ಕಚೇರಿ ತಲುಪಿ ಜೆಂಗೋಲಿ, ಕಾಂಟ್ರಾಕ್ಟ್, ಹಂಗಾಮಿ, ಕ್ಯಾಶುಯಲ್ ಇತ್ಯಾದಿ ಹೆಸರಿನಲ್ಲಿ ಕೂಲಿಗೆ ಒಳಪಟ್ಟ ಕಾರ್ಮಿಕರನ್ನು ಕಾಯಂಗೊಳಿಸಿ ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ನೀಡಬೇಕೆಂಬ ಬೇಡಿಕೆಯನ್ನು ಮಂಡಿಸಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ಈ ಸಂಬಂಧವಾಗಿ ತೋಟ ಪ್ರದೇಶಗಳಲ್ಲಿ ಕರಪತ್ರ ಹಾಗೂ ಭಿತ್ತಿ ಪತ್ರಗಳ ಮೂಲಕ ಪ್ರಚಾರ ನಡೆಸಲಾಯಿತೆಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ. ಆ ಕಾರ್ಯಕ್ರಮದ ನಾಯಕತ್ವವನ್ನು ಅಲ್ಲಿನ ಕಾರ್ಮಿಕ ಮುಖಂಡರಾದ ಕಾ. ಎ. ಸಿ ಕೇಶವ, ಕಾ. ಜಿ. ಎಸ್. ರಾಘವೇಂದ್ರ ವಹಿಸಿದ್ದರು. ಇದೇ ದಿನ ನಗರದ ಬಳಿಯ ಮ್ಯಾಲಿ ಮನೆ, ಕಳಸ ಹಾಗೂ ಸುಳಿಮನೆ ತೋಟಗಳಲ್ಲಿ ಕೂಡ ಧರಣಿ ಸತ್ಯಾಗ್ರಹ ನಡೆಯಿತೆಂದು ವರದಿ ತಿಳಿಸಿದೆ.

ಕೃಷಿ ಕೂಲಿ ಮಹಿಳೆಯ ಮೇಲೆ ಹಲ್ಲೆ

ಕಳಂಜೆ ಕೃಷಿ ಕೂಲಿಕಾರರ ಸಂಘ ಹಾಗೂ ಮಹೋಳಿ ಡಿ ವೈ. ಎಫ್. ಐ. ಘಟಕಗಳ ಜಂಟಿ ಸಭೆ ತಾರೀಖು 27-6-86 ರಂದು ಬಸ್ರೂರು ಮೆರ್ಡಿ ಪ್ರದೇಶದ ಗದ್ದೆಯಲ್ಲಿ ನಾಟಿ ಮಾಡುತ್ತಿದ್ದ ಕಳಂಜಿ ಕೃಷಿಕೂಲಿಗಾರ ಮಹಿಳೆ ಎಸ್ತೆಲ್ ಡಿ. ಸೋಜರ ಮೇಲೆ ಮೆರ್ಡಿ ಪ್ರದೇಶದ ಭೂಮಾಲಿಕರಾದ ಸತೀಶ ಶೆಟ್ಟಿಯವರು ನಡೆಸಿದ ಹಲ್ಲೆಯನ್ನು ಖಂಡಿಸಿತು. ಸತೀಶಶೆಟ್ಟಿಯವರ ಮನೆಗೆ ನಾಟಿಗೆ ಬಾರದೆ ಬೇರೆ ರೈತರ ಮನೆಗೆ ನಾಟಿಗೆ ಹೋಗಿರುವುದೆ ಹಲ್ಲೆಗೆ ಕಾರಣವಾಗಿರುತ್ತದೆ.

ಅಪರಾಧಿಯಾಗಿರುವ ಶೆಟ್ಟಿಯ ಮೇಲೆ ಕಾನೂನು ರೀತಿಯ ಕ್ರಮವನ್ನು ಕೈಗೊಳ್ಳಬೇಕೆಂದು ಕುಂದಾಪುರ ಪೋಲೀಸರನ್ನು ಸಭೆ ಒತ್ತಾಯಿಸಿತು.

ಕಾರ್ಮಿಕರಿಗೆ ಆರ್ಥಿಕ ಸೌಲಭ್ಯ

ಸಿಐಟಿಯು ನೇತೃತ್ವದಲ್ಲಿ ಸಿಂಧನೂರಿನ ಹಮಾಲಿ ಮತ್ತು ರಿಕ್ಷಾ ಕಾರ್ಮಿಕರಿಗೆ ಬ್ಯಾಂಕುಗಳ ಆರ್ಥಿಕ ಸಹಾಯದಿಂದ 42 ರಿಕ್ಷಾಗಳು ಮತ್ತು 12 ಒಂದೆತ್ತಿನ ಬಂಡಿಗಳು ಮಂಜೂರಾದವು. ದಿನಾಂಕ 25-6-86 ರಂದು ಸಾಯಂಕಾಲ 4-00 ಗಂಟೆಗೆ ಸಿಂಧನೂರಿನ ತಹಶೀಲ ಕಾರ್ಯಾಲಯದ ಹತ್ತಿರದಿಂದ ಎಲ್ಲ ರಿಕ್ಷಾಗಳು ಮತ್ತು ಬಂಡಿಗಳು ಮೆರವಣಿಗೆಯಲ್ಲಿ ಹೊರಟು ಪುರಸಭೆ ಮೈದಾನ ಸೇರಿದವು. ಸಮಾರಂಭದ ಉದ್ಘಾಟನೆ ಮಾಡಿದ ಕಾ. ಪುರುಷೋತ್ತಮ ಕಲಾಲಬಂಡಿ ಇವರು ಮಾತನಾಡುತ್ತಾ ಏರುತ್ತಿರುವ ಬೆಲೆಗಳಿಗನುಗುಣವಾಗಿ ಅಸಂಘಟಿತ ಕಾರ್ಮಿಕರಿಗೆ ಮತ್ತು ದುಡಿಯುವ ಜನತೆಗೆ ಇವತ್ತಿನ ಸರಕಾರಗಳು ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದರೆ ಮಾತ್ರ ನಮ್ಮ ದೇಶದಲ್ಲಿ ಬಡತನ, ನಿರುದ್ಯೋಗ ಮತ್ತು ಇನ್ನಿತರ ಸಮಸ್ಯೆಗಳನ್ನು ಪರಿಹಾರ ಕಾಣುತ್ತವೆಂದು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಕಾ. ಬಸವರಾಜಪ್ಪ ಮಾಲೀಪಾಟೀಲ ಅಧ್ಯಕ್ಷರು ಕರ್ನಾಟಕ ಪ್ರಾಂತ ರೈತ ಸಂಘ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿ. ಟಿ. ಪುರುಷೋತ್ತಮ ಸೀನಿಯರ್ ಮ್ಯಾನೇಜರ್ ಕೆನರಾಬ್ಯಾಂಕ್ ಸಿಂಧನೂರು ಮತ್ತು ಶ್ರೀ ಬಾಲಕೃಷ್ಣ ಬಡಿಗೇರ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್, ಹಾಗೂ ಕಾಂ. ಜಿ. ವೆಂಕನಗೌಡ ಅಧ್ಯಕ್ಷರು ಸಿಪಿಟಿಯು ನಗರ ಸಮಿತಿ ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕಾಂ. ಬಾಷುಮಿಯಾ ಕಾರ್ಯದರ್ಶಿ ಸಿಐಟಿಯು ನಗರ ಸಮಿತಿ ಇವರು ಸ್ವಾಗತಿಸಿದರು. ಕಾಂ. ಶೇಕ್ಷಾಖಾದ್ರಿ ಇವರು ವಂದನಾರ್ಪಣೆ ಮಾಡಿದರು.

ಆಳಂದಕ್ಕೆ ಪಕ್ಷದ ನಿಯೋಗ

ಸಿ. ಪಿ. ಐ. (ಎಂ) ನ ಗುಲ್ಬರ್ಗಾ ಜಿಲ್ಲಾ ಸಮಿತಿಯ ನಿಯೋಗವು ಸಮಿತಿಯ ಕಾರ್ಯದರ್ಶಿ ಕಾ. ಮಹ್ಮದ್ ಹಸನ್ ಖಾನ್‌ರವರ ನೇತೃತ್ವದಲ್ಲಿ ಆಳಂದಕ್ಕೆ ಭೇಟಿ ನೀಡಿ ಅಲ್ಲಿ ಜೂನ್ 21 ರಂದು ನಡೆದ ಗೋಲೀಬಾರ್ ಪ್ರಕರಣದ ಬಗ್ಗೆ ಪರಿಶೀಲನೆ ನಡೆಸಿತು. ಅಂದು ಗೋಲಿಬಾರ ಆದ ಸ್ಥಳಕ್ಕೆ ತೆರಳಿ ಅಲ್ಲಿನ ನಿವಾಸಿಗಳ, ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನು ಪಡೆದುಕೊಂಡಿದೆಯೆಂದು ಪ್ರಕಟನೆ ತಿಳಿಸಿದೆ. ಕಾರಹುಣ್ಣಿಮೆ ಸಾಂಪ್ರದಾಯಕ ಹಬ್ಬವಾದ್ದರಿಂದ ಪರಿಸ್ಥಿತಿಯನ್ನು ಗ್ರಹಿಸಿ ಸರ್ಕಾರ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದಲ್ಲಿ ಗೋಲಿಬಾರ್ ಘಟನೆಯನ್ನು ತಪ್ಪಿಸಬಹುದಿತ್ತೆಂದು ಅದು ಅಭಿಪ್ರಾಯಪಟ್ಟಿದೆ. ಆಳಂದದಲ್ಲಿ ನಡೆದ ಗಲಭೆ ಜಾತೀಯ ಅಥವ ಮತೀಯವಲ್ಲದಿದ್ದರೂ ಕೂಡ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಅದಕ್ಕೆ ಮತೀಯ ಬಣ್ಣ ಬಳಿಯಲು ಯತ್ನಿಸಿದ್ದಾರೆಂಬುದಾಗಿ ಹೇಳಿಕೆ ತಿಳಿಸಿದೆ.

ಗೋಲಿಬಾರಿನಲ್ಲಿ ಸತ್ತವರ ಕುಟುಂಬದವರಿಗೆ ಮತ್ತು ಗಾಯಗೊಂಡವರಿಗೆ ಹೆಚ್ಚಿನ ಪರಿಹಾರಧನ ಒದಗಿಸಬೇಕೆಂದು ಮತ್ತು ಇಡೀ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ಸಿ.ಪಿ.ಐ.(ಎಂ)ನ ಗುಲ್ಬರ್ಗಾ ಜಿಲ್ಲಾ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ. ಗೋಲಿಬಾರ್‌ನಲ್ಲಿ ಮಡಿದವರಿಗಾಗಿ ಅದು ತನ್ನ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಸೋವಿಯತ್ ಕೆಂಪು ಸೈನ್ಯಕ್ಕೆ ಕೆಂಪು ವಂದನೆಗಳು

ಹರಿಹರ ; 45 ವರ್ಷಗಳ ಹಿಂದೆ ಸೋವಿಯತ್ ಯೂನಿಯನ್ನಿನ ಮೇಲೆ ನಾಜಿ ಸೈನ್ಯ ಮೋಸಗಾರಿಕೆಯ ಆಕ್ರಮಣ ಮಾಡಿದಾಗ ಸೋವಿಯತ್ ಕೆಂಪು ಸೈನ್ಯವು ನಡೆಸಿದ ಧೀರೋದಾತ್ತ ಹೋರಾಟ ಮತ್ತು ಸೋವಿಯತ್ ಜನತೆ ಮಾಡಿದ ಅಪಾರ ತ್ಯಾಗವನ್ನು ಹರಿಹರದಲ್ಲಿ ನಡೆಸಲಾದ ಕಾರ್ಮಿಕರ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ವಿ. ಜಿ. ಕೆ. ನಾಯರ್ ಅವರು "ಅಂದು ಹಿಟ್ಲರನ ರಾಕ್ಷಸೀ ನೇತೃತ್ವದ ಅಡಿಯಲ್ಲಿ ಪ್ರಥಮ ಸಮಾಜವಾದಿ ದೇಶವನ್ನು ನಾಶಗೊಳಿಸಲು ಬಂಡವಾಳಶಾಹಿ ಜಗತ್ತು ಕನಸು ಕಾಣುತ್ತಿದ್ದಂತೆ ಇಂದು ರೇಗನ್ ನಾಯಕತ್ವದ ಅಡಿಯಲ್ಲಿ ಸಮಾಜವಾದಿ ದೇಶಗಳನ್ನು ನಾಶಮಾಡಲು ಹವಣಿಸಲಾಗುತ್ತಿದೆ ಎಂದರು.

ವಿಶ್ವದ ಕಾರ್ಮಿಕರ ಸಂಗಡ ನಾವೆಲ್ಲರೂ ಒಂದಾಗಿ ಧ್ವನಿ ಎತ್ತಬೇಕಾಗಿದೆ. ಎಂದು ಹೇಳಿದರು. ಹರಿಹರ ಸಿ. ಐ. ಟಿ. ಯು. ಸಮನ್ವಯ ಸಮಿತಿ ಏರ್ಪಡಿಸಿದ ಈ ಸಭೆಯಲ್ಲಿ ಕಿರ್ಲೋಸ್ಕರ್, ಎಚ್. ಪಿ. ಎಫ್., ಗ್ರಾಸಿಲೀನ್, ಸಂಗಂ ಸಾಲ್ವೆಂಟ್, ಶತೂರ್ ಸಿಮೆಂಟ್ ಫ್ಯಾಕ್ಟರಿ, ಮತ್ತು ಹರಿಹರ ತಾಲ್ಲೂಕ್ ಬೀಡಿ ಕಾರ್ಮಿಕ ಸಂಘದ ಕೆಲಸಗಾರರು ಭಾಗವಹಿಸಿದ್ದರು. ಆರಂಭದಲ್ಲಿ ಆರ್. ಬಿ. ಅಂಗಡಿ ಮತ್ತು ಕೊನೆಯಲ್ಲಿ ನಿತ್ಯಾನಂದಸ್ವಾಮಿ ಮಾತನಾಡಿದರು.

ರೈತ ಹೋರಾಟಗಾರರ ಮೇಲೆ ಪೋಲೀಸರ ದೌರ್ಜನ್ಯ - ಖಂಡನೆ

ದಿನಾಂಕ 23-6-86 ರಂದು ಜಿಲ್ಲಾ ಸಮಿತಿ ನಿರ್ಣಯದಂತೆ ಕುಷ್ಟಗಿ, ಯಲಬುರ್ಗಾ, ಮತ್ತು ಮಾನ್ವಿ ತಾಲೂಕು ಸಮಿತಿಗಳ ಅಡಿಯಲ್ಲಿ ರೈತರ ನ್ಯಾಯಯುತವಾದ ಬೇಡಿಕೆಗಳಿಗಾಗಿ ಶಾಂತ ರೀತಿಯಿಂದ ಹೋರಾಟ ನಡೆಸುತ್ತಿರುವ ರೈತರ ಮೇಲೆ ಜನತಾ ಶಾಸಕರ ಕುಮ್ಮಕ್ಕಿನಿಂದ ಪೋಲಿಸರು ಲಾಠಿ ಚಾರ್ಜ್ ಅಶ್ರುವಾಯು, ಬಂಧನ, ಮೊಕದ್ದಮೆಗಳನ್ನು ಹಾಕಿದ್ದನ್ನು ಪ್ರತಿಭಟಿಸಿ ಮೆರವಣಿಗೆ ಮುಖಾಂತರ, ರೈತರ ಬೇಡಿಕೆಗಳ ಘೋಷಣೆಯೊಂದಿಗೆ ತಹಶೀಲ ಕಛೇರಿಗೆ ಹೋಗಿ, ತಹಸಿಲ್ದಾರರಿಗೆ ಮನವಿ ಸಲ್ಲಿಸಿ 5 ಘಂಟೆಗಳ ಕಾಲ ಧರಣಿ ಸತ್ಯಾಗ್ರಹ ನಡೆಸಲಾಯಿತು. ಧರಣಿ ಸತ್ಯಾಗ್ರಹದಲ್ಲಿ 4 ಗ್ರಾಮಗಳ 80 ಜನರು ಪಾಲ್ಗೊಂಡಿದ್ದರು. ಈ ಮೊದಲು ಧರಣಿ ಸತ್ಯಾಗ್ರಹಕ್ಕೆ ರೈತರು ಬರದಂತೆ ಪೋಲಿಸ್ ಅಧಿಕಾರಿಗಳು ಸಂಘಟನೆ ಇರುವ ಹಳ್ಳಿಗಳಿಗೆ ಹೋಗಿ ರೈತರು ಸತ್ಯಾಗ್ರಹಕ್ಕೆ ಬರದಂತೆ ಅಡ್ಡಿ ಮಾಡಿದ್ದು ತಿಳಿದು ಬಂದಿದೆ. ಇದನ್ನು ಕೂಡ ತಾಲೂಕು ಸಮಿತಿ ತೀವ್ರವಾಗಿ ಖಂಡಿಸಿ ಪೋಲಿಸರ ಈ ವರ್ತನೆ ಬಗ್ಗೆ ಜಿಲ್ಲಾ ಪೋಲಿಸ್ ವರಿಷ್ಟ ಅಧಿಕಾರಿಗಳಲ್ಲಿ ದೂರು ಸಲ್ಲಿಸಿದೆ.

ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಆರ್. ಕೆ. ದೇಸಾಯಿಯವರು ಮಾತನಾಡಿದರು.

ನರಮೇಧದ ವಿರುದ್ಧ ಬಂದ್

2ನೇ ಪುಟದಿಂದ

ಪರಿಹಾರಕ್ಕೆ ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಎಲ್ಲಾ ಸಹಕಾರ ನೀಡುವುದಾಗಿ ಸಾರಿತು. ಕಗ್ಗೊಲೆಗೆ ವಿರೋಧ ಪ್ರಕಟಿಸಲು ಮೇ 31 ರಂದು ರಾಜ್ಯ ಬಂದ್‌ಗೆ ಕರೆ ನೀಡಿತು.

ಮೇ 31 ರಂದು ಬೆಳಿಗ್ಗೆ 6 ರಿಂದ ಸಂಜೆ 6ರ ವರೆಗೆ 12 ಗಂಟೆಗಳಷ್ಟು ಕಾಲ ನಡೆದ ಬಂದ್ ಭಾರಿ ಯಶಸ್ಸುಗಳಿಸಿತು. ಎಲ್ಲಾ ದೈನಂದಿನ ಚಟುವಟಿಕೆಗಳು ಸ್ತಬ್ಧವಾಗಿದ್ದವು.

ಇದರ ನಂತರವೂ ಸಿ.ಪಿ.ಐ (ಎಂ) ಮತ್ತು ಸಿ.ಪಿ.ಐ. ಜಂಟಿ ಪ್ರಚಾರ ಮುಂದುವರಿಸಬೇಕೆಂದು ನಿರ್ಧರಿಸಲಾಗಿದೆ. ಕೆಲವು ರಾಜ್ಯ ಪಕ್ಷಗಳು ಈ ಸಂದರ್ಭದಲ್ಲಿ ಸಂಕುಚಿತ ಪ್ರಾದೇಶಿಕ ಭಾವನೆಯನ್ನು ಹರಡುತ್ತಿರುವುದರಿಂದ ಇದರ ಅಗತ್ಯ ಇನ್ನೂ ಹೆಚ್ಚಾಗಿದೆ. ಶ್ರೀಲಂಕಾದ ಸಮಗ್ರತೆಯ ಚೌಕಟ್ಟಿನೊಳಗೆ ರಾಜಕೀಯ ಪರಿಹಾರ ಒಂದೇ ತಮಿಳು ಸಮಸ್ಯೆ ಪರಿಹಾರ ಒದಗಿಸಬಲ್ಲದು ಎಂದು ಸಿ. ಪಿ. ಐ. (ಎಂ) ಪ್ರಚಾರ ಮಾಡುತ್ತಿದೆ. ಈಗ ಸಿ.ಪಿ.ಐ. ಸಹ ಇದೇ ನೀತಿ ಅಂಗೀಕರಿಸಿದ್ದು ಜಂಟಿ ಪ್ರಚಾರ ಸಾಧ್ಯವಾಗಿದೆ.

ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

ಶಿವಮೊಗ್ಗ ನಗರದ ಕರ್ನಾಟಕ ಸಂಘದಲ್ಲಿ ಶಿವಮೊಗ್ಗ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರ ನಡೆಯಿತು. ಶಿಬಿರಕ್ಕೆ ಆಯ್ಕೆಯಾದ ನೂರು ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಸಂಸತ್ ಸದಸ್ಯ, ಡಿ. ವೈ. ಎಫ್. ಐ. ಸಹಕಾರ್ಯದರ್ಶಿ ಕಾ| ಎಂ. ಎ. ಬೇಬಿಯವರು ಮುಖ್ಯ ಉಪನ್ಯಾಸಕರಾಗಿದ್ದರು. ರಾಜ್ಯ ಕಾರ್ಯದರ್ಶಿ ಶಿವರಾಂ ಸಂಘಟನೆಯ ಬಗ್ಗೆ ಉಪನ್ಯಾಸ ನೀಡಿದರು.

ರೈತ ಸಂಘದ ಮುಖಂಡ ಕೆ. ಎಂ. ಶ್ರೀನಿವಾಸ್, ಡಿ. ವೈ. ಎಫ್. ಐ. ಜಿಲ್ಲಾ ಸಂಚಾಲಕ ಎಲ್. ರಂಗೇಗೌಡ ಇವರುಗಳು ಸಹ ಶಿಬಿರವನ್ನುದ್ದೇಶಿಸಿ ಮಾತನಾಡಿದರು.

ಪ್ರಾರಂಭದಲ್ಲಿ ಶಿವಮೊಗ್ಗ ನಗರ ಘಟಕದ ಸಂಚಾಲಕ ಕಾ. ದಾಸ್ ಅವರು ಸ್ವಾಗತ ಗೀತೆಯನ್ನು ಹಾಡಿದರು. ಜಿಲ್ಲಾ ಸಹ ಸಂಚಾಲಕ ಎಸ್. ಬಿ. ಶಿವಶಂಕರ್‌ರವರು ಸ್ವಾಗತಿಸಿದರು.

ನಿಕರಾಗುವ :

ಸಾಮ್ರಾಜ್ಯಶಾಹಿಗಳ ವಿರುದ್ಧ ತೀರ್ಪು

ಇದೇ ಜೂನ್ 28 ರಂದು ಹೇಗ್‌ನಲ್ಲಿರುವ ಅಂತರ್ರಾಷ್ಟ್ರೀಯ ನ್ಯಾಯಾಲಯ ನಿಕಾರಗುವಾದ ಸ್ಯಾಂಡಿನಿಸ್ಟಾ ಸರಕಾರವನ್ನು ಉರುಳಿಸಲು ಅಮೇರಿಕಾ ಸಂಯುಕ್ತಸಂಸ್ಥಾನ ಪ್ರಯತ್ನಿಸುತ್ತಿದೆಯೆಂದು, ಇದು ಅಂತರ್ರಾಷ್ಟ್ರೀಯ ಕಾನೂನಿನ ಉಲ್ಲಂಘನೆಯೆಂದು ತೀವ್ರವಾಗಿ ಖಂಡಿಸಿದೆ. 26 ತಿಂಗಳುಗಳ ಹಿಂದೆ ನಿಕಾರಗುವಾ ಸಲ್ಲಿಸಿದ ದೂರಿನ ದೀರ್ಘ ವಿಚಾರಣೆಯ ನಂತರ ತನ್ನ ತೀರ್ಪು ನೀಡುತ್ತಾ ನ್ಯಾಯಾಲಯ ಕಾಂಟ್ರಾ (ಪ್ರತಿಕ್ರಾಂತಿಕಾರಿ) ಗಳಿಗೆ ಶಸ್ತ್ರ ನೆರವು ಮತ್ತು ತರಬೇತಿ ನೀಡುವ ಮೂಲಕ ಅಮೇರಿಕಾವು ಸಂಯುಕ್ತ ರಾಷ್ಟ್ರ ಸನ್ನದ್ದನ್ನು ಉಲ್ಲಂಘಿಸಿದೆ ಹಾಗೂ ಕಾಂಟ್ರಾಗಳಿಗೆ ಹಣಕಾಸಿನ ನೆರವು ನೀಡುವುದು, ನಿಕಾರಾಗುವಾದ ಬಂದರುಗಳಲ್ಲಿ ಸಿಡಿಗುಂಡುಗಳನ್ನಿಟ್ಟದ್ದು ಆ ದೇಶದ ಸಾರ್ವಭೌಮತೆಯ ಉಲ್ಲಂಘನೆ ಎಂದು ನ್ಯಾಯಾಲಯ ಸ್ಪಷ್ಟತೀರ್ಪಿತ್ತಿದೆ.

ತನ್ನ ಕುಕೃತ್ಯಗಳು ಕಾನೂನು ಬಾಹಿರ ಎಂದು ಮೊದಲೇ ತಿಳಿದಿದ್ದ ಅಮೇರಿಕನ್ ಸಾಮ್ರಾಜ್ಯಶಾಹಿಗಳು ನ್ಯಾಯಾಲಯದ ವಿಚಾರಣೆಯಲ್ಲಿ ಭಾಗವಹಿಸಿರಲಿಲ್ಲ, ಅಲ್ಲದೆ ಅಂತರ್ರಾಷ್ಟ್ರೀಯ ನ್ಯಾಯಾಲಯದ ಈ ತೀರ್ಪು ಬರುತ್ತಿರುವಂತೆಯೇ ಅತ್ತ ಅಮೇರಿಕನ್ ಪ್ರತಿನಿಧಿ ಸಭೆ ಕಾಂಟ್ರಾಗಳಿಗೆ 10 ಕೋಟಿ ಡಾಲರುಗಳ ನೆರವು (ಇದರಲ್ಲಿ 7 ಕೋಟಿ ಮಿಲಟರಿ ನೆರವು) ನೀಡಬೇಕೆಂಬ ರೇಗನ್ ಆಡಳಿತದ ಬೇಡಿಕೆಗೆ ಅನುಮತಿ ನೀಡಿ ಜಗತ್ತಿನ ಸಾರ್ವಜನಿಕಾಭಿಪ್ರಾಯವನ್ನು ತೀವ್ರವಾಗಿ ಕೆರಳಿಸಿದೆ. ಸೋವಿಯೆಟ್ ಒಕ್ಕೂಟ ಹೇಳಿರುವಂತೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಇತ್ತೀಚಿನ ಈ ಕುಕೃತ್ಯ ಅಂತರ್ರಾಷ್ಟ್ರೀಯ ಸಮುದಾಯಕ್ಕೆ ಒಡ್ಡಿರುವ ಒಂದು ಸವಾಲು.

ಜುಲೈ 5 ರಂದು ನಡೆದ ಸಂಯುಕ್ತ ರಾಷ್ಟ್ರಸಂಸ್ಥೆಯ ಭದ್ರತಾ ಸಮಿತಿಯ ಸಭೆಯಲ್ಲಿ ಸುಮಾರಾಗಿ ಎಲ್ಲಾ ಸದಸ್ಯ ರಾಷ್ಟ್ರಗಳೂ ಅಮೇರಿಕಾವನ್ನು ತೀವ್ರವಾಗಿ ಟೀಕಿಸಿದವೆಂದು ವರದಿಯಾಗಿದೆ. ಈ ಹಿಂದೆ ಇರಾನಿನ ತೆಹರಾನ್‌ನಲ್ಲಿ ಅಮೇರಿಕನ್ ರಾಯಭಾರಿ ಕಚೇರಿಯ ಮುತ್ತಿಗೆ ನಡೆದಾಗ ಇದೇ ಅಮೇರಿಕಾ ಇದೇ ಅಂತರ್ರಾಷ್ಟ್ರೀಯ ನ್ಯಾಯಾಲಯದ ಮೊರೆ ಹೋದುದನ್ನು ಜ್ಞಾಪಿಸಿಕೊಟ್ಟ ಇರಾನಿನ ಪ್ರತಿನಿಧಿಸಾಮ್ರಾಜ್ಯಶಾಹಿಗಳ ಗೋಸುಂಬೆತನವನ್ನು ಬಯಲಿಗೆಳೆದರು. ಸಭೆಯಲ್ಲಿ ಭಾಗವಹಿಸಿದ ಎಲ್ಲಾ ದೇಶಗಳೂ ಅಂತರ್ರಾಷ್ಟ್ರೀಯ ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿ, ಲ್ಯಾಟಿನ್ ಅಮೇರಿಕಾದ ಬಗ್ಗೆ ತನ್ನ ನೀತಿಯನ್ನು ಬದಲಿಸಿ, ಮೆಕ್ಸಿಕೋ, ವೆನೆಜುವೆಲಾ, ಕೊಲಂಬಿಯಾ ಮತ್ತು ಪನಾಮಾ ಈ ಕಾಂಟಡೋರಾ ದೇಶಗಳ ಶಾಂತಿ ಪ್ರಯತ್ನಗಳಿಗೂ ನೆರವಾಗಬೇಕೆಂದು ಅಮೇರಿಕಾವನ್ನು ಒತ್ತಾಯಿಸಿದೆ.

ಆದರೆ ಉನ್ಮತ್ತ ಸಾಮ್ರಾಜ್ಯ ಶಾಹಿಗಳು ಅಂತರ್ರಾಷ್ಟ್ರೀಯ ಸಮುದಾಯದ ಹಿತನುಡಿಗಳತ್ತ ಕಿವಿಗೊಡುವ ಲಕ್ಷಣಗಳು ಇನ್ನೂ ಇಲ್ಲ. ○

ಅಫಘಾನಿಸ್ಥಾನ:

ಈಡೇರಿದ ಶತ ಶತಮಾನಗಳ ಬಯಕೆ

ಅಫಘಾನಿಸ್ತಾನದಲ್ಲಿ 1978 ರ ಸವುರ್ ಕ್ರಾಂತಿಯ ನಂತರ ಇದುವರೆಗೆ 7 ಲಕ್ಷ ಹೆಕ್ಟೇರ್ ಜಮೀನನ್ನು 3 ಲಕ್ಷ 30 ಸಾವಿರ ರೈತ ಕುಟುಂಬಗಳಿಗೆ ಹಂಚಲಾಗಿದೆ. ಜಮೀನಿನ ಹಾಗೂ ನೀರಿನ ಹಂಚಿಕೆಯ ಉಸ್ತುವಾರಿ ನೋಡಿಕೊಳ್ಳಲು ಎಲ್ಲೆಡೆ ಚುನಾಯಿತ ರೈತ ಸಮಿತಿಗಳನ್ನು ರಚಿಸಲಾಗಿದೆ.

ತಮ್ಮದೇ ಆದ ಒಂದು ತುಣುಕು ನೆಲ ಪಡೆಯುವ ಸುದಿನಕ್ಕಾಗಿ ಶತಮಾನಗಳ ಕಾಲ ಕಾದಿದ್ದರು ಅಫ್‌ಘಾನಿಸ್ತಾನದ ರೈತರು. ಕ್ರಾಂತಿಯ ಮೊದಲು ಮೂರನೇ ಒಂದಂಶ ರೈತರು ಭೂಹೀನರಾಗಿದ್ದರು. ಉಳಿದವರಲ್ಲಿ ಬಹುಪಾಲು ರೈತರು ತಮ್ಮ ಅಲ್ಪ ಜಮೀನನ್ನು ನಂಬಿ ಬದುಕುವುದು ಅಸಾಧ್ಯವೇ ಆಗಿತ್ತು. ಭೂಮಾಲಿಕರಲ್ಲಿ, ದೊಡ್ಡ ಗೇಣಿದಾರರಲ್ಲಿ ಕೂಲಿಗಳಾಗಿ ದುಡಿದು ಅವರು ಜೀವನ ಸಾಗಿಸಬೇಕಾಗಿತ್ತು. ಈ ಸಂಕಷ್ಟ ತಾಳಲಾರದ ಕೆಲವರು ನಗರಗಳತ್ತ ಹೋದರೆ ಅಲ್ಲೂ ಅವರಿಗೆ ಕಾದಿದ್ದುದು ಬಡತನವೇ.

1978ರ ಕ್ರಾಂತಿಯೊಂದಿಗೆ ಅಫ್‌ಘಾನಿಸ್ತಾನದ ಸಮಸ್ತ ದುಡಿಯುವ ಜನತೆಗೆ ಹೊಸ ಯುಗವೊಂದು ಆರಂಭವಾಯಿತು. ಹೊಸ ಸರಕಾರ ಕೈಗೊಂಡ ಮೊದಲ ಕ್ರಮವೆಂದರೆ ನೀರೊದಗಿಸುವ ಹಾಗೂ ಭೂಸುಧಾರಣೆಯ ಘೋಷಣೆ. ರೈತರ ಎಲ್ಲಾ ಸಾಲಗಳನ್ನು ರದ್ದು ಮಾಡಲಾಯಿತು. ಈಗ ದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಸುಧಾರಣಾ ಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗುತ್ತಿದೆ.

ಈ ಸುಧಾರಣಾ ಕ್ರಮಗಳ ಜೊತೆಗೆ ಪ್ರಜಾಪ್ರಭುತ್ವವಾದೀ ಅಫಘಾನಿಸ್ತಾನದ ಸರಕಾರ ರೈತರಿಗೆ ಹಲವಾರು ವಿಶೇಷಾಧಿಕಾರಗಳನ್ನು ನೀಡಿದೆ. ಕಮ್ಮಿ ದರದಲ್ಲಿ ಬೀಜ, ಗೊಬ್ಬರ ಖರೀದಿ ಹಾಗೂ ಕೃಷಿ ಸಲಕರಣೆಗಳನ್ನು ಒದಗಿಸಲಾಗುತ್ತಿದೆ. ಬೆಲೆಯನ್ನು ಸಾಕಷ್ಟು ಹೆಚ್ಚಿಸಿ ಕೃಷಿ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ, ○

ಸಮಾಜವಾದೀ ಪ್ರಜಾಪ್ರಭುತ್ವ

ಸೋವಿಯತ್ ಸಮಾಜವಾದೀ ಗಣತಂತ್ರ ಒಕ್ಕೂಟದ ಸಂವಿಧಾನ 18 ವರ್ಷ ತುಂಬಿದ ಎಲ್ಲಾ ನಾಗರಿಕರಿಗೆ ಮತ ನೀಡುವ ಹಾಗೂ ಚುನಾಯಿತರಾಗುವ ಅಧಿಕಾರ ನೀಡಿದೆ. ಒಕ್ಕೂಟದ ಅತ್ಯುಚ್ಛ ಪ್ರಾತಿನಿಧಿಕಸಭೆಯಾದ ಸುಪ್ರೀಂ ಸೋವಿಯತ್‌ನ ಸದಸ್ಯರಾಗಲು ಕನಿಷ್ಟ ವಯಸ್ಸು 21 ವರ್ಷ.

ಸುಪ್ರಿಂ ಸೋವಿಯತ್‌ನ ಈಗಿನ ಸದಸ್ಯತ್ವದ ಕೆಲವು ಅಂಕಿ-ಅಂಶಗಳು ಹೀಗಿವೆ–

ಕಾರ್ಮಿಕರು-35-8%

ಸಾಮೂಹಿಕ ಕೃಷಿ ಕ್ಷೇತ್ರಗಳ ರೈತರು -14.7%

ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಸದಸ್ಯರು -66.6%

ಪಕ್ಷೇತರ ಸದಸ್ಯರು -35. 3%

ಮಹಿಳೆಯರು– 35.3%

30 ವರ್ಷಕ್ಕಿಂತ ಕಮ್ಮಿ ವಯಸ್ಸಿನ ಪ್ರತಿನಿಧಿಗಳು-20.3%

ಅಮೇರಿಕಾ- ೩೪ ಲಕ್ಷ ಹಸಿದ ಕಂದಮ್ಮಗಳು

ತನ್ನ ಶ್ರೀಮಂತಿಕೆಯ ಬಗ್ಗೆ ಹೆಮ್ಮೆಪಡುವ ದೇಶ ಅಮೇರಿಕಾ. ಆದರೆ ಅಲ್ಲಿಯೂ 3 ಕೋಟಿ 40 ಲಕ್ಷ ಜನ "ಬಡತನದ ರೇಖೆ"ಯ ಕೆಳಗಿದ್ದಾರಂತೆ! (1980 ರಲ್ಲಿ ಈ ಸಂಖ್ಯೆ 2 ಕೋಟಿ 9 ಲಕ್ಷವಿತ್ತು.) ಇವರಲ್ಲಿ

ಅಂತರ್ರಾಷ್ಟ್ರೀಯ

34 ಲಕ್ಷ ಮಕ್ಕಳು. ಈ ಹಸಿವಿನಿಂದ ಕಂಗಾಲದ, ಮನೆ–ಮಾರಿಲ್ಲದ 34 ಲಕ್ಷ ಅಮೇರಿಕನ್ ಮಕ್ಕಳಿಗೆ ನೆರವಾಗಲೆಂದು ಇದೇ ಮೇ 25 ರಂದು ಲಕ್ಷಾಂತರ ಅಮೇರಿಕನ್ನರು ದೇಶದ ಪೂರ್ವ ಕರಾವಳಿಯಿಂದ ಪಶ್ಚಿಮ ಕರಾವಳಿಯವರೆಗೆ ಕೈಹಿಡಿದು ಒಂದು ಮಾನವ ಸರಪಣಿಯನ್ನು ಹೆಣೆದುಕೊಂಡು ಹಣ ಸಂಗ್ರಹಣೆಯ ಯತ್ನ ನಡೆಸಿದರು. ಇದರಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ 10 ರಿಂದ 35 ಡಾಲರ್‌ವರೆಗೆ ವಂತಿಗೆ ನೀಡುವ ಮೂಲಕ ಧನ ಸಂಗ್ರಹಿಸಲಾಯಿತು.

ನ್ಯೂಯಾರ್ಕ್ ನಗರದಲ್ಲಿ ಈ 'ಸರಪಣಿ'ಯ ಸಂಘಟಕರಾದ ಮೇರಿ ಕೆಲ್ಲಿಯವರಿಗೆ "ನ್ಯೂಟೈಮ್ಸ್" ಪತ್ರಿಕೆಯ ವರದಿಗಾರರು ಎರಡು ಸರಳ ಪ್ರಶ್ನೆಗಳನ್ನು ಹಾಕಿದರು. ಒಂದು, ಅಮೇರಿಕನ್ ಆರ್ಥಿಕತೆ ಪರಿವರ್ತನೆಗೊಳ್ಳುತ್ತಾ ದೊಡ್ಡ ವ್ಯಾಪಾರಸ್ಥರು ಲಾಭ ರಾಶಿ ಹಾಕುತ್ತಿರುವಾಗ ಹಸಿವಿನಿಂದ ಕಂಗಾಲಾದ, ನಿರಾಶ್ರಿತ ಮಕ್ಕಳ ಸಂಖ್ಯೆ ಏಕೆ ಹೆಚ್ಚುತ್ತಲಿದೆ ? ಎರಡು, ಸರಕಾರ ಏಕೆ ಆಹಾರ ಕೂಪನ್‌ನ ಸೌಲಭ್ಯವನ್ನು ಕಡಿತಗೊಳಿಸುತ್ತಿದೆ ? ಈ ಎರಡೂ ಪ್ರಶ್ನೆಗಳಿಗೆ ಈ ಸಂಘಟಕರ ಬಳಿ ಉತ್ತರವಿರಲಿಲ್ಲ. ಉತ್ತರ ಬೇಕಾದಲ್ಲಿ ಶ್ವೇತ ಭವನಕ್ಕೆ (ಅಮೇರಿಕನ್' ಅಧ್ಯಕ್ಷರ ಭವನ ಪ್ರಶ್ನೆ ಹಾಕಿ) ಎಂದಷ್ಟೇ ಹೇಳಲು ಸಾಧ್ಯವಾಯಿತು,

"ಕೆಲವು ಜನಗಳಿಗೆ ಅಮೇರಿಕಾದಲ್ಲಿ ಎಲ್ಲಿಂದ, ಹೇಗೆ ನೆರವು ಪಡೆಯಬೇಕು ಎಂಬುದು ತಿಳಿಯದ್ದರಿಂದಷ್ಟೇ ಹೊಟ್ಟೆಗಿಲ್ಲದೆ ಕಷ್ಟಪಡುತ್ತಿದ್ದಾರೆಯೇ ಹೊರತು ಆಹಾರ ಸಿಗದೆ ಅಥವಾ ಅದನ್ನು ಕೊಳ್ಳುವ ಸಾಮರ್ಥ್ಯವಿಲ್ಲದೆ ಅಲ್ಲ" ಎಂದು ಶ್ವೇತಭವನ ವಾಸಿ ಅಧ್ಯಕ್ಷ ರೇಗನ್ ಈ ಮಾನವ ಸರಪಣಿಯ ಕೆಲವು ದಿನಗಳ ಹಿಂದೆಯಷ್ಟೇ ಉದ್ಗಾರವೆತ್ತಿದ್ದರು. ಆದರೆ ಎಲ್ಲಿಂದ, ಹೇಗೆ ನೆರವು ಪಡೆಯಬೇಕೆಂದು ರೇಗನ್ ಆಡಳಿತ ತನ್ನ ಮಿಲಿಯಗಟ್ಟಲೆ ಹಸಿದ ನಾಗರಿಕರಿಗೆ ಇನ್ನೂ ತಿಳಿಸಿಲ್ಲ. ಅವರು ತಮ್ಮ ಈ ಹೇಳಿಕೆಗೆ ಪ್ರಾಯಶ್ಚಿತ ಮಾಡಿಕೊಳ್ಳಲಿ ಎಂದೋ ಏನೋ ಕೊನೆಯಗಳಿಗೆಯಲ್ಲಿ ಅವರು ಸಪತ್ನೀಕರಾಗಿ ಈ ಸರಪಣಿಯಲ್ಲಿ ಭಾಗವಹಿಸುವಂತೆ ಮಾಡಲಾಯಿತು.

ಒಬ್ಬ ಅಮೇರಿಕನ್ ಲೇಖಕ ಹೇಳಿದಂತೆ, "ಬಡತನವನ್ನು ಎದುರಿಸದ ಬಯಸದ ಮಧ್ಯಮ ಹಾಗೂ ಉಚ್ಚ ವರ್ಗದ ಮಂದಿ ತಮ್ಮ ಉದಾರ ಹೃದಯವನ್ನು ತೋರ್ಪಡಿಸಲು, ಅದೇ ವೇಳೆ ಇವೆಲ್ಲದಕ್ಕೆ ತಾವೇನೂ ಜವಾಬ್ದಾರರಲ್ಲ ಎಂದು ಕೈತೊಳೆದುಕೊಳ್ಳಲು ಇದೊಂದು ದಾರಿ" ಇಂತಹ "ಹೃದಯವಂತ" ದಾನಶೂರರು, ರೋಟರಿ, ಲಯನ್ಸ್‌ಗಳು ನಮಗೂ ಅಪರಿಚಿತರೇನಲ್ಲ !

ಇಂತಹ 'ಸರಪಣಿ'ಗಳು ಎಷ್ಟೇ ದೊಡ್ಡ ಪ್ರಮಾಣದಲ್ಲಿ ನಡೆದರೂ ಹಸಿದವರು ಒಂದೆರಡು ಬಾರಿ ತುಣುಕು ರೊಟ್ಟಿ ಪಡೆದಾರೇ ಹೊರತು ಹಸಿದ ಮಿಲಿಯಾಂತರ ಮಕ್ಕಳ ಸ್ಥಿತಿ ಇದರಿಂದ ಸುಧಾರಿಸಲಾರದು. ಆದರೆ ಅಮೇರಿಕಾದಂತಹ ಬಂಡವಾಳಶಾಹೀ ಸಮಾಜ ತನ್ನ 34 ಲಕ್ಷ ಹಸಿದ ಮಕ್ಕಳಿಗೆ ಇದಕ್ಕಿಂತ ಹೆಚ್ಚೇನನ್ನು ತಾನೇ ಮಾಡಬಲ್ಲರು ?

ಸಿ ಪಿ ಐ (ಎಂ)ನ ಅಭಿನಂದನೆಗಳು

ಪೋಲಿಷ್ ಕಾರ್ಮಿಕರ ಪಕ್ಷಕ್ಕೆ ಸಂದೇಶ

ಪೋಲಿಷ್ ಸಂಯುಕ್ತ ಕಾರ್ಮಿಕರ ಪಕ್ಷದ 10ನೇ ಮಹಾಧಿವೇಶನವಾರ್ಸಾದಲ್ಲಿ ಜೂನ್ 28 ರಿಂದ ನಡೆಯಿತು. ಇದಕ್ಕೆ ಮೊದಲು ಅಂದರೆ ಜೂನ್ 25 ರಿಂದ 28 ರ ವರೆಗೆ ಬೆಲ್‌ಗ್ರೇಡ್‌ನಲ್ಲಿ "ಯುಗೋಸ್ಲಾವಿಯಾ ಕಮ್ಯುನಿಸ್ಟ್ ಲೀಗ್"ನ ಹದಿಮೂರನೇಮಹಾಧಿವೇಶನ ಜರುಗಿತು. ಇವೆರಡೂ ಮಹಾಧಿವೇಶನಗಳಲ್ಲಿ ಸಿ.ಪಿ.ಐ. (ಎಂ) ಪರವಾಗಿ ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಸಮರ್ ಮುಖರ್ಜಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಪೋಲಂಡಿನ ಪಕ್ಷಕ್ಕೆ ಸಿ. ಪಿ ಐ (ಎಂ) ನ ಕೇಂದ್ರ ಸಮಿತಿ ಕಳುಹಿಸಿದ ಶುಭಾಶಯ ಸಂದೇಶದಲ್ಲಿ ಸಮಾಜವಾದೀ ವ್ಯವಸ್ಥೆಯನ್ನು ಛಿದ್ರಗೊಳಿಸುವ ಸಾಮ್ರಾಜ್ಯಶಾಹಿಗಳ ಪ್ರತಿಕ್ರಾಂತಿ ಉದ್ದೇಶಗಳನ್ನು ವಿರೋಧಿಸಿ ನಿಂತು ತನ್ನ ಆರ್ಥಿಕ ವ್ಯವಸ್ಥೆಯಲ್ಲಿ ಸಮಾಜವಾದೀ ಮಾನದಂಡಗಳನ್ನು ಮರುಸ್ಥಾಪಿಸುವ ಹಾಗೂ ಈ ಹಿಂದೆ ನುಸುಳಿಕೊಂಡ ವಿಕೃತಿಗಳನ್ನು ನಿರ್ಮೂಲಗೊಳಿಸುವ ಕರ್ತವ್ಯಗಳನ್ನು ಕೈಗೆತ್ತಿಕೊಂಡಿರುವ ಬಗ್ಗೆ ತನ್ನ ಸಂತೋಷವನ್ನು ವ್ಯಕ್ತಪಡಿಸಿದೆ. ಕಳೆದ ವರ್ಷಗಳಲ್ಲಿ ಪೋಲಂಡ್ ಸಾಧಿಸಿದ ದೃಢೀಕರಣ ಹಾಗೂ ಮುನ್ನಡೆಯ ಪ್ರಕ್ರಿಯೆಗೆ ಹತ್ತನೇಅಧಿವೇಶನ ಮತ್ತಷ್ಟು ಉತ್ತೇಜನ ನೀಡುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ. ಪೋಲೆಂಡಿನ ಕಾರ್ಮಿಕ ವರ್ಗದ ಈ ಪಕ್ಷ ಮಾರ್ಕ್ಸ್‌ವಾದ-ಲೆನಿನ್‌ವಾದದ ವೈಜ್ಞಾನಿಕ ಮತ್ತು ಮಾನವೀಯ ಸಿದ್ಧಾಂತದ ಆಧಾರದ ಮೇಲೆ ಎಲ್ಲಾ ತೊಂದರೆಗಳನ್ನೂ ನಿವಾರಿಸಿಕೊಳ್ಳಲು ಉದ್ಯುಕ್ತವಾಗಿದೆ ಎಂದು ಹೇಳಿದೆ.

ವೇತನ ಮಂಡಳಿಗೆ ಸಿ.ಐ.ಟಿ.ಯು ಪ್ರತಿಭಟನೆ

ಸಾರ್ವಜನಿಕ ಕ್ಷೇತ್ರದ ನೌಕರರಿಗೆ ಸಮಾನವಾಗಿ ಕೇಂದ್ರ ಸರ್ಕಾರೀ ನೌಕರರಿಗೆ ವೇತನ ನೀಡುವುದನ್ನು ನಿರಾಕರಿಸಿರುವ ವೇತನ ಮಂಡಳಿಯ ನೀತಿಯನ್ನು ಸಿಐಟಿಯು ಖಂಡಿಸಿದೆ. ಕೇಂದ್ರ ಸರಕಾರೀ ನೌಕರನೊಬ್ಬನು ಸಾರ್ವಜನಿಕ ಕ್ಷೇತ್ರದ ನೌಕರನೊಬ್ಬ ಮಾಡುವಂತಹುದೇ ಕೆಲಸ ಮಾಡಿದರೂ ಕೂಡ ಅವನಿಗೆ ಸಮಾನವಾದ ವೇತನವನ್ನು ನಿರಾಕರಿಸಿರುವುದು ಅರ್ಥವಾಗದ ಸಂಗತಿಯೆಂಬುದಾಗಿ ಸಿಐಟಿಯು ಅಧ್ಯಕ್ಷರಾದ ಬಿ. ಟಿ. ರಣದಿವೆ ಅವರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರಿ ನೌಕರರಿಗೆ ಮಸಾಹತುಶಾಹೀ ರೀತಿಯ ವೇತನ ನೀಡುವುದನ್ನು ಸಿಐಟಿಯು ವಿರೋಧಿಸಿದೆ. ಇದು ಸುಖೀ ರಾಜ್ಯವೃದ್ಧಿಯ ಕಲ್ಪನೆಗೇ ಅಸಂಬದ್ಧವಾದುದಾಗಿದೆ. ಸಂಬಳ ಮತ್ತಿತರ ಭತ್ತೆಗಳ ವಿವರಗಳು ಈಗ ಲಭ್ಯವಿಲ್ಲದ ಕಾರಣ, ಮನೆ ಬಾಡಿಗೆ ಭತ್ಯೆಯಲ್ಲಿ ಹೆಚ್ಚಳವಾಗಿದೆಯೆಂಬ ಹೇಳಿಕೆಯ ಬಗ್ಗೆ ಈಗ ಯಾವುದೇ ತೀರ್ಮಾನ ಕೈಗೊಳ್ಳುವುದು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ತುಟ್ಟಿಭತ್ಯೆಯನ್ನು ಶೇಕಡಾ ನೂರರಷ್ಟು ತಟಸ್ತಗೊಳಿಸುವ ಬಗ್ಗೆಯೂ ಕೂಡ ಪೂರ್ತಿ ವರದಿ ಬರುವ ತನಕ ಯಾವುದೇ ತೀರ್ಮಾನ ತೆಗೆದುಕೊಳ್ಳುವಂತಿಲ್ಲ ಎಂಬುದಾಗಿ ಹೇಳಿಕೆ ತಿಳಿಸಿದೆ.

ಸರ್ಕಾರವು ಪುನರ್ವಿಮರ್ಶೆ ನಡೆಸಿ ಕನಿಷ್ಠ 950 ರೂಪಾಯಿಗಳನ್ನು 600 ಪಾಯಿಂಟಿಗೆ ನಿಗದಿಗೊಳಿಸಬೇಕೆಂದು ಸಿಐಟಿಯು ಒತ್ತಾಯಿಸಿದೆ.

ಕೇಂದ್ರ ಸರ್ಕಾರೀ ನೌಕರರು ತಮ್ಮ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಐಕ್ಯತೆಯನ್ನು ಬೆಳೆಸಿಕೊಳ್ಳಬೇಕೆಂದು ಸಿಐಟಿಯು ಕರೆ ನೀಡಿದೆ.

ಜುಲೈ 25 ಪ್ರತಿಭಟನಾ ದಿನಾಚರಣೆ
"ಶಿಕ್ಷಣ ರಕ್ಷಿಸಿ ; ಭಾರತ ಉಳಿಸಿ"

ಜುಲೈ 4 ರಿಂದ 6 ರ ವರೆಗೆ ಮೈಸೂರಿನಲ್ಲಿ ಜರುಗಿದ ರಾಜ್ಯ ಸಮಿತಿ ಸಭೆಯು ಕೇಂದ್ರ ಸರ್ಕಾರದ ಜನವಿರೋಧಿ ನೂತನ ಶಿಕ್ಷಣ ನೀತಿಯ ಅಪಾಯದ ಬಗ್ಗೆ ಜನಜಾಗೃತಿಮೂಡಿಸಲು ಜುಲೈ 25ರಂದು ಕರ್ನಾಟಕದಾದ್ಯಂತ ಪ್ರತಿಭಟನಾ ದಿನಾಚರಣೆಗೆ ಕರೆ ನೀಡಿದೆ. ಅಂದು ಶಾಲಾ-ಕಾಲೇಜುಗಳ ಮುಂದೆ ಪ್ರತಿಭಟನಾ ಪ್ರದರ್ಶನ, ಮೆರವಣಿಗೆ; ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗುವುದು. ನೂತನ ಶಿಕ್ಷಣ ನೀತಿಯ ಕುರಿತು ಹೊತ್ತಿಗೆಯೊಂದನ್ನು ಸಹ ಕನ್ನಡದಲ್ಲಿ ಪ್ರಕಟಿಸಿ ಬಿಡುಗಡೆ ಮಾಡಲಾಗುವುದು. ಕೇಂದ್ರ ಸರ್ಕಾರಕ್ಕೆ ಎಲ್ಲಾ ಶಾಖೆಗಳಿಂದಲೂ ತಂತಿ ಸಂದೇಶ ನೀಡಿ ನೂತನ ಶಿಕ್ಷಣ ನೀತಿಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲಾಗುವುದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ.

○

ಸ್ಥಗಿತಗೊಂಡ ಗಡಿ ಚಳುವಳಿ

(ಒಂದನೇ ಪುಟದಿಂದ)

ಕೇರಳ ಸರ್ಕಾರದ ವಿರುದ್ಧ ಚಳುವಳಿ ಹೂಡಲು ಪ್ರೋತ್ಸಾಹಿಸಿದಂತಾಗಿದೆ".

ಡೆಕ್ಕನ್ ಹೆರಾಲ್ಡ್ ಸಂಪಾದಕೀಯ "ಈ ಒಪ್ಪಂದದಲ್ಲಿ ಏನೂಸ್ಪಷ್ಟತೆ ಇಲ್ಲ. ಮತ್ತೊಮ್ಮೆ ಗಲಾಟೆ ಆಗುವುದಿಲ್ಲೆಂಬ ಪೂರ್ಣ ಭರವಸೆಯೂ ಅದರಲಿಲ್ಲ, 'ಕೊಟ್ಟು ತೆಗೆದುಕೊಳ್ಳುವ' ಎಂಬ ಶಬ್ದ ಒಪ್ಪಂದದಲ್ಲಿದೆ. ಕರ್ನಾಟಕ ಸರಕಾರ ಅಲ್ಪ ಭಾಷಿಕರಿಗೆ ಹಕ್ಕು ಮತ್ತು ಸೌಲಭ್ಯ ಒದಗಿಸಿದರೆ ಮಾತ್ರ ಮಹಾರಾಷ್ಟ್ರ ಸರಕಾರ ತನ್ನಲ್ಲಿರುವ ಕನ್ನಡ ಅಲ್ಪಭಾಷಿಕರಿಗೆ ಅಂಥ ಹಕ್ಕು ಮತ್ತು ಸವಲತ್ತು ಒದಗಿಸುವುದು ಎಂದರೆ ಒಂದು ರಾಜ್ಯ ಅವುಗಳನ್ನು ನಿರಾಕರಿಸಿದರೆ ಮತ್ತೊಂದು ರಾಜ್ಯ ಪ್ರತೀಕಾರ ಮಾಡುವುದು ಎಂದರ್ಥ. ಅಂದರೆ ಪ್ರತಿಯೊಂದು ರಾಜ್ಯ ಬಹುಭಾಷಿಕರ ಸೊತ್ತು ಮಾತ್ರ ಎಂದರ್ಥವಾಗುತ್ತದೆ. ಮತ್ತೊಂದು ರಾಜ್ಯದಲ್ಲಿ ಏನೇ ಆಗಲಿ ಒಂದು ರಾಜ್ಯದಲ್ಲಿರುವ ಭಾಷಿಕ ಮತ್ತು ಧರ್ಮೀಯ ಅಲ್ಪಮತಸ್ತರಿಗೆ ಸಂಪೂರ್ಣ ಹಕ್ಕುಮತ್ತು ಸೌಲತ್ತು ಸಿಗದಿದ್ದರೆ, ನಮ್ಮ ರಾಜಕೀಯ ಮತ್ತು ಸಮಾಜದ ಮಾನವೀಯ ನಿಲುವಿಗೆ ಧಕ್ಕೆ ಬರುತ್ತದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

"ಮ. ಏ. ಸಮಿತಿಯವರು ಕರ್ನಾಟಕದಲ್ಲಿ ತಪ್ಪು ಮಾರ್ಗದರ್ಶನ ನಿರುಪಯೋಗ ಹಾಗೂ ಸುದೀರ್ಘವಾಗಿ ನಡೆಸಿದ ಹೋರಾಟ ಭಾಷಿಕ ಸಂಕುಚಿತ ಭಾವನೆಯ ಅಪಾಯವನ್ನು ಬಯಲಿಗೆಳೆದಿದೆ. ಈ ಚಳುವಳಿಯಲ್ಲಿ 9 ಜನ ಸತ್ತು ಕೋಟ್ಯಾವಧಿ ರೂ. ಬೆಲೆಯ ಆಸ್ತಿಗೆ ಹಾನಿ ಉಂಟಾಗಿ, ಬೆಳಗಾವಿ ಮತ್ತು ಅದರ ಸುತ್ತಮುತ್ತ 18 ಶಾಲೆಗಳಿಗೆ ಧಕ್ಕೆಯಾಗಿರುವುದರಿಂದ 10,000 ಕನ್ನಡ ಮಕ್ಕಳು ಬೀದಿಪಾಲಾಗುವಂತೆ ಮಾಡಿದೆ. ಬೆಳಗಾವಿ ನಗರಕ್ಕೆ ಹಲವಾರು ಸಲ ಕುಡಿಯುವ ನೀರು ಸಿಗದಂತಾಯಿತು. ಈ ಚಳುವಳಿ ಹಾಗೆಯೇ ಚಳುವಳಿಗೆ ಮುಖಂಡತ್ವ ನೀಡಿದವರಿಗೆ ಮುಖಭಂಗವಾಗಿದೆ. ತನಗಾದ ಮುಖಭಂಗವನ್ನು ಮರೆಮಾಚಲು 'ಇದರಲ್ಲಿ ರಾಜಕೀಯ ಅಂಶವಿದೆ' ಎಂದು ಎಸ್. ಎಂ. ಜೋಶಿ ಹೇಳಿದ್ದಾರೆ. ಬೆಳಗಾವಿ ನಗರದ ಮೇಲೆ ಮಹಾರಾಷ್ಟ್ರದ ಹಕ್ಕಿದೆಂದು ಅವರು ಪ್ರತಿಪಾದಿಸುವುದಾದರೆ, ಚಳುವಳಿಗಾರರ ಮೇಲೆ ಅದು ಕೆಟ್ಟ ರೀತಿಯಲ್ಲಿ ಪ್ರತಿದಾಳಿ ಮಾಡಿದಂತಾಗಿದೆಂದು ತಿಳಿಯಬೇಕು. ಮಹಾರಾಷ್ಟ್ರ ಪರ ವಾದಕ್ಕೆ ಅದು ಹಿನ್ನಡೆಯಾಗಿದೆ" ಎಂದು ಟೈಮ್ಸ್ ಆಫ್ ಇಂಡಿಯಾ ತನ್ನ ಸಂಪಾದಕೀಯದಲ್ಲಿ ಹೇಳಿದೆ.

ಕಾಂಗ್ರೆಸ್, ಜನತಾ ಮೊದಲಾದ ಬಂಡವಾಳಶಾಹಿ ಪಕ್ಷಗಳು ಭಾಷೆ ಮತ್ತು ಗಡಿ ವಿಷಯದಲ್ಲಿ ರಾಷ್ಟ್ರಮಟ್ಟದಲ್ಲಿ ಒಂದು ನಿರ್ದಿಷ್ಟ ನಿಲುವು ತಾಳಲು ಅಸಮರ್ಥವಾಗಿವೆ. ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮಾತ್ರ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ದೇಶದಲ್ಲಿರುವ ಪ್ರತಿಯೊಂದು ರಾಜ್ಯದ ಗಡಿಗಳಲ್ಲಿ ಅಲ್ಪ ಭಾಷಿಕರಿದ್ದಾರೆ. ಅವರಿಗೆಲ್ಲ ತಮ್ಮ ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉಚ್ಚಮಟ್ಟದ ವಿದ್ಯಾಭ್ಯಾಸ ಪಡೆಯುವ ಹಕ್ಕಿದೆ. ಅದನ್ನು ಮೊಟಕುಗೊಳಿಸಬಾರದು. ಎಲ್ಲ ಅನುಕೂಲತೆಗಳನ್ನೂ ಅವರಿಗೆ ಆಯಾ ರಾಜ್ಯ ಸರಕಾರ ಒದಗಿಸಬೇಕು. ಆದರೆ ಅಂಥವರು ಆ ರಾಜ್ಯ ಸರಕಾರಗಳಲ್ಲಿ ನೌಕರಿ ಅಪೇಕ್ಷಿಸುವುದಾದರೆ ಆರಾಜ್ಯದ ಭಾಷೆಕಲಿಯಬೇಕೆಂದು ಒತ್ತಾಯಿಸಬಹುದಷ್ಟೆ ಅಲ್ಲದೆ, ಕಡ್ಡಾಯವಾಗಿ ಮಾಡುವುದು ಸರಿಯಲ್ಲವೆಂದು ಸಿ. ಪಿ. ಐ. (ಎಂ) ನ ಸ್ಪಷ್ಟ ನಿಲುವೆಯಾಗಿದೆ. ತಮ್ಮ ರಾಜ್ಯಗಳ ಭಾಷೆಯನ್ನು ಕಡ್ಡಾಯವಾಗಿ ಹೇರುವ ಕರ್ನಾಟಕ-ಮಹಾರಾಷ್ಟ್ರ ಸರಕಾರಗಳ ನೀತಿ ಸರಿಯಲ್ಲ ಎಂದು ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಸಿ. ಪಿ. ಐ. (ಎಂ) ಮುಖಂಡತ್ವದಲ್ಲಿರುವ ಪಶ್ಚಿಮ ಬಂಗಾಲದ ಎಡರಂಗ ಸರಕಾರ ಅಲ್ಲಿರುವ ಎಲ್ಲಾ ಅಲ್ಪ ಭಾಷಿಕರಿಗೆಲ್ಲ ತಮ್ಮ ಮಾತೃಭಾಷೆಯಲ್ಲಿಯೇ ಉಚ್ಚಮಟ್ಟದವರೆಗೂ ಶಿಕ್ಷಣ ಒದಗಿಸುವ ವ್ಯವಸ್ಥೆ ಮಾಡಿದೆ. ಬಂಗಾಲಿಯನ್ನು ಒತ್ತಾಯವಾಗಿ ಹೇರಿಲ್ಲ.

ಅಲ್ಪ ಭಾಷಿಕರಲ್ಲಿ ಸೌಹಾರ್ದತೆ ಕಾಪಾಡಿಕೊಂಡು ಹೋಗುವುದರ ಮೂಲಕ ಇಡೀ ದೇಶದ ಹಿತ ಸಾಧಿಸುವುದು ಅಗತ್ಯ.

○

ಲಾಲ್‌ಡೆಂಗಾಗೆ ಕೇಂದ್ರ ಸರಕಾರದ ಶರಣಾಗತಿ

(ಒಂದನೆಯ ಪುಟದಿಂದ)

ಈಗ ಬೆಳೆದಿರುವ ಪ್ರಭಾವಳಿಗೆ ಕೇಂದ್ರ ಸರಕಾರ ಆತನನ್ನು ತಲೆಯ ಮೇಲೇರಿಸಿಕೊಂಡು ಪೂಜೆ ಮಾಡಿದ್ದು ಕಾರಣ ಎಂದಿದೆ ಆ ಪತ್ರಿಕೆ.

ಮಿಜೋರಾಂನ ಹಿತಾಸಕ್ತಿಗಳಿಗಿಂತ ಆಳುವ ಪಕ್ಷದ ಹಿತಾಸಕ್ತಿಗಳಿಗೇ ಈ ಒಪ್ಪಂದದಲ್ಲಿ ಪ್ರಾಧಾನ್ಯ ಕೊಡಲಾಗಿದೆ ಎಂಬ ಭಾವನೆ ಬರುವಂತಿದೆ ಎಂದಿರುವ ಇನ್ನೊಂದು ಪತ್ರಿಕೆ "ಇಂಡಿಯನ್ ಎಕ್ಸ್‌ಪ್ರೆಸ್" ಹಾಗಿಲ್ಲದಿದ್ದರೂ ಕೂಡ ಈ ರಾಜಕೀಯ ಒಪ್ಪಂದ ಒಂದು ಕೆಟ್ಟ ಪರಂಪರೆ ಆರಂಭಿಸಿದೆಎಂದು ಹೇಳಿದೆ. ಕೊನೆಗಳಿಗೆಯಲ್ಲಿ ಕೈಕೊಡುವ ಇತಿಹಾಸವನ್ನೇ ಹೊಂದಿರುವ, 1976ರಲ್ಲಿ ಕೇಂದ್ರದೊಂದಿಗೆ ಮಾಡಿಕೊಂಡ ಒಪ್ಪಂದದಿಂದ ನುಣುಚಿಕೊಂಡ ಲಾಲ್‌ಡೆಂಗಾ ಈ ರಾಜ್ಯಮಟ್ಟದ ಒಪ್ಪಂದಕ್ಕೆ ಬದ್ಧರಾಗಿರುತ್ತಾರೆಯೇ ? ಸದಾ ಆತನನ್ನು ಕಣ್ಣುಮುಚ್ಚಿ ಹಿಂಬಾಲಿಸುತ್ತಿರದೆ ಇನ್ನೂ ಸ್ವಾಧೀನತೆ ಬಯಸುವ ಎಂ. ಎನ್. ಎಫ್. ಶಸ್ತ್ರಗಳನ್ನು ಕೆಳಗಿಡಬಹುದೇ ? ಎಂದು ಆ ಪತ್ರಿಕೆ ಪ್ರಶ್ನಿಸಿದೆ.

"ಸ್ಟೇಟ್ಸ್‌ಮನ್"ನ ಸಂಪಾದಕರೂ ಇಂತಹದೇ ಅನುಮಾನ ವ್ಯಕ್ತಪಡಿಸಿ, ಈಶಾನ್ಯ ಪ್ರದೇಶದಲ್ಲಿ ಸ್ಥಿತಿ ಸುಧಾರಿಸಬಹುದೆಂಬ ನಿರೀಕ್ಷೆಯ ದೃಷ್ಟಿಯಿಂದ ಮಾತ್ರ ಇದನ್ನು ಸ್ವಲ್ಪ ಮಟ್ಟಿಗೆ ಸ್ವಾಗತಿಸಬಹುದೆಂದಿದ್ದಾರೆ,

ಈ ಒಪ್ಪಂದವನ್ನು ಸಮರ್ಥಿಸಲು ಕಷ್ಟಪಟ್ಟು ಪ್ರಯತ್ನಿಸಿರುವ ಟೈಮ್ಸ್ ಆಫ್ ಇಂಡಿಯಾದ ಸಂಪಾದಕೀಯ ಕೂಡಾ ಅಂತಿಮವಾಗಿ ಈ ಬಗ್ಗೆ ಅತಿ ತಾನಂದ ಪಡಲು ಕಾರಣಗಳಿಲ್ಲ ಎಂದು ಹೇಳಬೇಕಾಗಿ ಬಂದಿದೆ.

ಒಂದು ದಶಕದ ಕಾಲ ದೂರದ ಬ್ರಿಟನ್ನಿನಲ್ಲಿ ಕೂತು ಸಾಮ್ರಾಜ್ಯಶಾಹಿಗಳ ಆಶ್ರಯದಲ್ಲಿ ವಿದೇಶದಿಂದ ಸಶಸ್ತ್ರ ದಂಗೆಗಳನ್ನು ನಡೆಸುತ್ತಾ ಬಂದ ಲಾಲ್‌ಡೆಂಗಾನಂತಹವರ ಜತೆ ಮಾಡಿಕೊಂಡ ಒಪ್ಪಂದದ ಬಗ್ಗೆ ಅರ್ಜುನ್ ಸಿಂಗ್ ಹಾಗೂ ಆಳುವ ಪಕ್ಷ ಹೆಮ್ಮೆಪಟ್ಟುಕೊಳ್ಳುವಂತಹದ್ದೇನೂ ಇಲ್ಲ. ಮಿಜೋರಾಂನಲ್ಲಿ ಇಪ್ಪತ್ತು ವರ್ಷಗಳ ದಂಗೆಕೋರತನ ಇತ್ಯರ್ಥಗೊಂಡಿರುವುದು ಸ್ವಾಗತಾರ್ಹವಾಗಿದ್ದರೂ ಸ್ವತಂತ್ರ ಮಿಜೋರಾಂನ ದುಷ್ಟ ಯೋಚನೆಯಿಂದ ನಡೆಯುತ್ತಿದ್ದ ದಂಗೆಕೋರತನದೆದುರು ಭಾರತ ಸರಕಾರ ಶರಣಾಗತವಾಗಿದೆ ಎಂಬ ವಾಸ್ತವಾಂಶವನ್ನು ಮರೆಮಾಚಲು ಸಾಧ್ಯವಿಲ್ಲ. ಇದು ಆಳುವ ಪಕ್ಷದ ಮೇಲೆ, ಅದು ನಡೆಸುವ ಸರಕಾರದ ಮೇಲೆ ಚರ್ಚ್ ಶಕ್ತಿಗಳು ಬೀರಬಹುದಾದ ಪ್ರಭಾವ ಎಷ್ಟು ಎಂಬುದರ ಮೇಲೂ ಬೆಳಕು ಚೆಲ್ಲಿದೆ. ಮಿಜೋ ದಂಗೆ ಕೋರತನದ ಹಿಂದೆ ಇರುವ ವಿಛಿದ್ರಕಾರಿ ಹಾಗೂ ದೇಶವನ್ನೊಡೆಯುವ ಪ್ರಯತ್ನಗಳನ್ನು ಖಂಡಿತಾ ನಿರ್ಲಕ್ಷಿಸುವಂತಿಲ್ಲ.

ಪವರ್ ಲೂಂ-ಮುಷ್ಕರ

(ಒಂದನೇ ಪುಟದಿಂದ)

ನೀತಿಯ ಅಭಾವದಿಂದಾಗಿ ಬಟ್ಟೆಗಿರಣಿ, ಪವರ್ ಲೂಮ್ ಮತ್ತು ಕೈ ಮಗ್ಗಗಳು ಬಿಕ್ಕಟ್ಟನ್ನೆದುರಿಸುತ್ತಲೇ ಬಂದಿವೆ. ಈ ಮೂರೂ ಕ್ಷೇತ್ರಗಳ ಸಲುವಾಗಿ ಒಂದು ಸಮಗ್ರ ನೀತಿ ನಿರೂಪಣೆ ಅಗತ್ಯ.

ಈ ಆಜ್ಞೆಯಿಂದ ಉಂಟಾಗಬಹುದಾದಭೀಕರಪರಿಸ್ಥಿತಿಯಕುರಿತು ಕೇಂದ್ರ ಸಿ. ಪಿ ಐ.(ಎಂ) ಸರಕಾರವನ್ನು ಎಚ್ಚರಿಸುತ್ತದೆ. ಕೇಂದ್ರ ಸರಕಾರದ ಪ್ರತಿಬಂಧಕಾಜ್ಞೆಯ ವಿರುದ್ಧ ಕರ್ನಾಟಕ ರಾಜ್ಯದ ಪವರ್ ಲೂಮ್ ಮಾಲಿಕರ ಸಂಘ ಕೊಟ್ಟಿರುವ ತಾ. 14 ರ ಬಂದ್ ಕರೆಗೆ ಸಿ. ಪಿ. ಐ. (ಎಂ) ಮತ್ತು ಸಿ. ಐ. ಟಿ. ಯು ತನ್ನ ಪೂರ್ಣ ಬೆಂಬಲ ನೀಡುತ್ತದೆ, ಕೇಂದ್ರ ಸರಕಾರ ತನ್ನ ಆಜ್ಞೆಯನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಳ್ಳುತ್ತದೆ.

Printed & Published by P. Ramachandra Rao on behalf of the Communist Party of India [Marxist] Karnataka State Committee,
K. V. Temple Street, Sultanpet, Bangalore-560053 Editorial and manageriel office: L-56, K. V. Temple Street,
Sultanpet B-53 Phone : 75331
Editor P. Ramachandra Rao
Managing Editor ; N K. Upadhyaya